ಕಲ್ಯಾಣ ಕಿರಣ

ಸೆಪ್ಟೆಂಬರ್-2017

ಬೆಲೆ-20 ರೂ.



ಲಿಂಗಾಯತ ಸ್ವತಂತ್ರ ಧರ್ಮದ ಮಾನ್ಯತೆಗಾಗಿ ಬೃಹತ್ ರ‍್ಯಾಲಿ




ಬೆಳಗಾವಿಯಲ್ಲಿ ನಡೆದ ರ‍್ಯಾಲಿಯಲ್ಲಿ ಭಾಗವಹಿಸಿದ್ದ ಗಣ್ಯರು

ಬೆಳಗಾವಿಯಲ್ಲಿ ನಡೆದ ಲಿಂಗಾಯತ ರ್‍ಯಾಲಿ







ಬನ್ನಿ ಕಲ್ಯಾಣ ಪರ್ವಕೆ

ಬನ್ನಿ ಬನ್ನಿ ನೋಡಬನ್ನಿ ಬಸವ ಕಲ್ಯಾಣವ
ಬನ್ನಿ ಬನ್ನಿ ಹಾಡಬನ್ನಿ ಶರಣಸ್ಮರಣ ಗೀತೆಯ ॥ಪ॥

ಗುರು ಬಸವಣ್ಣನ ಕಾರ್ಯಕ್ಷೇತ್ರ ಕಲ್ಯಾಣ
ಮಹಾಮನೆ ಹೊಂದಿದ್ದ ದಿವ್ಯ ತಾಣ ಕಲ್ಯಾಣ
ಅನುಭವ ಮಂಟಪವ ಹೊಂದಿ, ಅಂದು ಮೆರೆದ ಕಲ್ಯಾಣ
ಲಿಂಗದೇವ ಲೀಲೆ ಹಾಡ್ದ ಶರಣ ಭೂಮಿ ಕಲ್ಯಾಣ ॥1॥

ಕಲ್ಯಾಣ ಪ್ರಣತೆಯಾಗಿ ಭಕ್ತಿರಸವೆ ತೈಲವಾಗಿ
ಆಚಾರ ಬತ್ತಿಹಿಡಿದು ಬೆಳಗಿತಂದು ಬಸವ ಜ್ಯೋತಿ
ಶಿವನ ಪ್ರಕಾಶದಲಿ ಬಾಳ ಹಣತೆ ಬೆಳಗಿಕೊಂಡು
ಶರಣ ಗಣವು ಕೂಡಿತಂದು ವಚನ ಜೇನು ನೀಡುತಲಿ ॥2॥

ಕಲ್ಯಾಣ ನಾಡಿನಲಿ ಅಂದು ಒಂದು ಕ್ರಾಂತಿಯಾಗಿ
ಧರ್ಮಪಿತರು ನಡೆದರು ಗಡಿಪಾರಿನ ದಂಡಗೊಂಡು
ಹರಳಯ್ಯ-ಮಧುವಯ್ಯ-ಶೀಲವಂತ ಶರಣರು
ಹರಣ ತೆತ್ತು ಹಾಡಿದರು ಬಸವ ತತ್ತ್ವ ಕ್ರಾಂತಿ ಗೀತ ॥3॥

ವಚನ ಸಿರಿಯ ರಕ್ಷಿಸಲು ಶರಣ ಗಣವು ನಿಂತಿತು
ತನುಮನ ಪ್ರಾಣಗಳ ಪಣಕ್ಕಿಟ್ಟು ಹೋರಾಡಿತು
ಹುತಾತ್ಮರಾದ ಶರಣರ ಸಂಕಲ್ಪ ಪೂರೈಸಲು
ಇಂದು ಅವರ ಚೇತನವ ತರುವಾ ಕಲ್ಯಾಣಕೆ ॥4॥

ಆಶ್ವಯುಜ ಮಾಸದಲಿ ನಡೆಯುತಿದೆ ಕಲ್ಯಾಣ ಪರ್ವ
ನಾಡ ಮೂಲೆ ಮೂಲೆಯಿಂದ ಬನ್ನಿ ಶರಣ ಬಂಧುಗಳೇ
ಬಸವ ಕರುಳ ಕುಡಿಗಳನ್ನು ಬೆಸೆಯುವ ಹಬ್ಬವಿದು
ವಚನ ಪರ್ವ ತತ್ತ್ವ ಪರ್ವ, ಕಮ್ಮನೆಯ ಶರಣ ಪರ್ವ ॥5॥

ತಮಿಳು ನಾಡು, ತೆಲುಗು ನಾಡು, ಮಹಾರಾಷ್ಟ್ರ, ಹಿಂದಿನಾಡು
ಕರುನಾಡಿನ ಮೂಲೆಯಿಂದ ಬನ್ನಿರೆಲ್ಲ ಕಲ್ಯಾಣಕೆ
ನಾವು ನೀವು ಎಲ್ಲ ಸೇರಿ ಶರಣರನ್ನು ಸ್ಮರಿಸುವಾ
ಛಲವ ತೊಟ್ಟು ಕಟ್ಟುವಾ ಮತ್ತೆ ನವಕಲ್ಯಾಣ. ॥6॥

– ಮಾತಾಜಿ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ಸಂಪುಟ-49 ಬಸವ ಶಕೆ -884 ಪಂಚ ವಾರ್ಷಿಕ ಸದಸ್ಯತ್ವ 1000 ರೂ.

ಸಂಚಿಕೆ-09 ಸೆಪ್ಟೆಂಬರ್- 2017 ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಲೇಖನಗಳು	ಲೇಖಕರು	ಪುಟ

ಸೆಪ್ಟೆಂಬರ್ – ಅಕ್ಟೋಬರ್‌ನಲ್ಲಿ ಬರುವ ಹಬ್ಬ ಹುಣ್ಣಿಮೆ

ಕಲ್ಯಾಣ ಕ್ರಾಂತಿ	–	ಸೆಪ್ಟೆಂಬರ್ 29
ಬಸವ ಧರ್ಮದ ವಿಜಯೋತ್ಸವ	–	ಸೆಪ್ಟೆಂಬರ್ 30
ಗಾಂಧೀಜಿ ಜಯಂತಿ	–	ಅಕ್ಟೋಬರ್ 02
ಕಲ್ಯಾಣದಲ್ಲಿ 16ನೇ ಕಲ್ಯಾಣಪರ್ವ	–	ಅ. 14,15,16
ಚನ್ನಬಸವೇಶ್ವರ ಜಯಂತಿ	–	ಅಕ್ಟೋಬರ್ 20

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, Basava Mantapa Road, 2nd Block, Rajajinagar, Bengaluru-560010. Phone : 080-23131476, Send SMS to 9945806297 Email-kalyana.kirana1134@gmail.com

ಓಂ ಶ್ರೀ ಗುರು ಬಸವಲಿಂಗಾಯ ನಮಃ

866666

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ
ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಹದಿನಾರನೆಯ

ಕಲ್ಯಾಣ ಪರ್ವ

2017ರ ಅಕ್ಟೋಬರ್ 14, 15 ಮತ್ತು 16ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 30ನೆಯ ಶರಣ ಮೇಳವು ಇದೇ 2017ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

> ''ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ ಬಂದು
> ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
> ಮರ್ತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತು''

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, ''ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ'' ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯಿಂದಲೂ ಕಲ್ಯಾಣಪರ್ವ ಎಂಬ ವಾರ್ಷಿಕ ಉತ್ಸವವನ್ನು ನಡೆಸಲಾಗುತ್ತಿದೆ. 2017ನೆಯ ಇಸವಿಯಲ್ಲಿ 16ನೆಯ ಕಲ್ಯಾಣ ಪರ್ವವು ಜರುಗಲಿದ್ದು ಅಕ್ಟೋಬರ್ 03, 04 ಮತ್ತು 06ರಂದು ನಡೆಯಲಿದೆ.

ಶರಣ(ಶನಿ)ವಾರ, ದಿ. 14ರಂದು ಬೆಳಿಗ್ಗೆ 10-30ಕ್ಕೆ ಉದ್ಘಾಟನೆ ಮತ್ತು ಸಾಮೂಹಿಕ ಪ್ರಾರ್ಥನೆ, ಮಧ್ಯಾಹ್ನ 3-30ರಿಂದ 5-30ರವರೆಗೆ ರಾಷ್ಟ್ರೀಯ ಬಸವ ದಳದ ಸಮಾವೇಶ ; ಸಂಜೆ -6-30ರಿಂದ ಚಿಂತನಗೋಷ್ಠಿ. ದಿ.15, ಭಾನು(ದೇವ)ವಾರದಂದು ಬೆಳಿಗ್ಗೆ 07-30ಕ್ಕೆ ಶರಣ ವಂದನೆ-ಶರಣರಿಗೆ ಶರಣಾರ್ಥಿ, ಬೆಳಿಗ್ಗೆ 10-30ಕ್ಕೆ ಸಾಮೂಹಿಕ ಪ್ರಾರ್ಥನೆ ಮಧ್ಯಾಹ್ನ 3-30ರಿಂದ 5-30ರವರೆಗೆ ಆಶುಭಾಷಣ ಸ್ಪರ್ಧೆ, ಸಂಜೆ 6-30ರಿಂದ ಚಿಂತನಗೋಷ್ಠಿ, ದಿ. 16 ಸೋಮ(ಶಿವ)ವಾರ

ದಂದು ಅಕ್ಕನಾಗಲಾಂಬಿಕೆಯ ಸಂಸ್ಮರಣೆಯ ನಿಮಿತ್ತ ಬಸವ ಧರ್ಮ ವಿಜಯೋತ್ಸವ ಕಾರ್ಯಕ್ರಮ ನಂತರ ಅಲ್ಲಮಪ್ರಭು ಶೂನ್ಯ ಪೀಠಾರೋಹಣ ಮತ್ತು ಸಮಾರೋಪ ಸಮಾರಂಭ ಜರುಗಲಿವೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು; ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು - ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. ಅಂಥ ಗಣಪರ್ವವನ್ನು ಇಂದು ನೀವು ನಾವು ಮಾಡಿ ತೋರಿಸಬೇಕಾಗಿದೆ. ಅಕ್ಟೋಬರ್ 13ರ ರಾತ್ರಿಯಿಂದ ಅಕ್ಟೋಬರ್ 17ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಮಾಡ ಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು. ಶರಣ ಬಂಧುಗಳು ಒಂದು ಹೊತ್ತಿನ ಪ್ರಸಾದ ದಾಸೋಹದ ವೆಚ್ಚವನ್ನು ಭರಿಸಲೂ ಅವಕಾಶ ಉಂಟು.

1. ಮಹಾಪೋಷಕರು : 15000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು : 10000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು : 5000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು : 3000 ರೂ
5. ಸ್ವಾಗತ ಸಮಿತಿ ಸದಸ್ಯತ್ವ : 600 ರೂ
6. ಪ್ರತಿನಿಧಿ ಶುಲ್ಕ : 300 ರೂ.

ಅನ್ನದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 10000/15000 ರೂಪಾಯಿಗಳ ಪುದುವಟ್ಟು (F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

ಇನ್‌ಕಮ್ ಟ್ಯಾಕ್ಸದಲ್ಲಿ 80ಜಿ ರಿಯಾಯಿತಿಯ ಸೌಲಭ್ಯವೂ ಇದೆ.

ಪೂಜ್ಯ ಶ್ರೀ ಮಹಾಜಗದ್ಗುರು
ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ (ರಿ.)
ಬಸವ ಮಂಟಪ, 2035, 20ನೆಯ ಮುಖ್ಯರಸ್ತೆ,
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
☎:080-22923736/9448137508

ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮಿಗಳು
ಪೀಠಾಧ್ಯಕ್ಷರು, ಅಲ್ಲಮಪ್ರಭು ಶೂನ್ಯ ಪೀಠ
ಬಸವ ಧರ್ಮ ಪೀಠ (ರಿ.)
ಬಸವ ಮಹಾಮನೆ, ಬಸವ ಕಲ್ಯಾಣ-585 327
ತಾ-ಬಸವಕಲ್ಯಾಣ, ಜಿ-ಬೀದರ್
☎:08481-252856/9448732456

ರಾಜ್ಯದ ವಿವಿಧೆಡೆ ಲಿಂಗಾಯತ ಮಹಾರ್‍ಯಾಲಿ

ಬಸವ ಧರ್ಮ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಮಹಾಜಗದ್ಗುರು ಡಾ॥ ಮಾತೆ ಮಹಾದೇವಿಯವರು ಬೀದರ್, ಕಲಬುರಗಿ ಮುಂತಾದ ಜಿಲ್ಲೆಗಳ ಲಿಂಗಾಯತ ಮಠಾಧೀಶರು, ಪೀಠಾಧಿಕಾರಿಗಳು ಈ ಲಿಂಗಾಯತ ಮಹಾರ್‍ಯಾಲಿ ನೇತೃತ್ವ ವಹಿಸಲಿದ್ದಾರೆ. ಮಹಾರಾಷ್ಟ್ರದ ಅಹ್ಮದಪುರ ಮಠದ ಶತಾಯುಷಿಗಳಾದ ಪೂಜ್ಯ ಶ್ರೀ ರಾಷ್ಟ್ರ ಸಂತ ಶಿವಲಿಂಗ ಶಿವಾಚಾರ್ಯರು ಸಹ ರ್‍ಯಾಲಿಯಲ್ಲಿ ಸಾನಿಧ್ಯ ವಹಿಸಲಿದ್ದಾರೆ. ಬೀದರ್ ರ್‍ಯಾಲಿಯಲ್ಲಿ ಭಾಗವಹಿಸಿರುವ ಎಲ್ಲ ಪೂಜ್ಯರು ಮುಂಬರುವ ದಿನಗಳಲ್ಲಿ ನಡೆಯುವ ರ್‍ಯಾಲಿಯಲ್ಲಿ ಭಾಗವಹಿಸಲಿದ್ದಾರೆ. ಪಕ್ಷಾತೀತವಾಗಿ ಎಲ್ಲ ರಾಜಕೀಯ ಪಕ್ಷಗಳ ಲಿಂಗಾಯತ ಮುಖಂಡರು ರ್‍ಯಾಲಿಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಲಾತೂರಿನಲ್ಲಿ ಸೆಪ್ಟೆಂಬರ್3 ರಂದು ಮಹಾರ್‍ಯಾಲಿ

ಮಹಾರಾಷ್ಟ್ರದ ಲಾತೂರಿನಲ್ಲಿ ಸೆಪ್ಟೆಂಬರ್ 3ರಂದು ಲಿಂಗಾಯತ ಮಹಾರ್‍ಯಾಲಿ ನಡೆಯಲಿದೆ.

ಕಲಬುರ್ಗಿಯಲ್ಲಿ ಸೆಪ್ಟೆಂಬರ್ 10 ರಂದು ಮಹಾರ್‍ಯಾಲಿ

ಎಲ್ಲ ಪೂಜ್ಯರ, ಮಠಾಧೀಶರ ನೇತೃತ್ವದಲ್ಲಿ ಕಲಬುರ್ಗಿಯ ಸುಲಫಲ ಮಠದ ಪೂಜ್ಯ ಜಗದ್ಗುರು ಶ್ರೀ ಸಾರಂಗಧರ ದೇಶಿಕೇಂದ್ರ ಸ್ವಾಮಿಗಳು ಸೇರಿದಂತೆ ಎಲ್ಲ ಲಿಂಗಾಯತ ರಾಜಕೀಯ ಮುಖಂಡರು ಸೇರಿ ಕಲಬುರ್ಗಿಯಲ್ಲಿ ಸೆಪ್ಟೆಂಬರ್ 10ರಂದು ಲಿಂಗಾಯತ ಮಹಾರ್‍ಯಾಲಿ ಆಯೋಜಿಸಿದ್ದಾರೆ.

ವಿಜಯಪುರದಲ್ಲಿ ಅಕ್ಟೋಬರ್‌ನಲ್ಲಿ ಮಹಾರ್‍ಯಾಲಿ

ವಿಜಯಪುರದಲ್ಲಿ ಕೂಡ ಲಿಂಗಾಯತ ಮಹಾರ್‍ಯಾಲಿ ನಡೆಯಲಿದೆ.

ಈ ಎಲ್ಲಾ ಕಡೆ ನಡೆಯುವ ರ್‍ಯಾಲಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಸವಾಭಿಮಾನಿಗಳು ಆಗಮಿಸಬೇಕೆಂದು ಕೋರುತ್ತೇವೆ.

– ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ
ರಾಷ್ಟ್ರಾಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ

ಸಿದ್ಧರಾಮೇಶ್ವರರ ವಾಣಿ

ಕಪಿಲಸಿದ್ಧ ಮಲ್ಲಿಕಾರ್ಜುನದೇವರ ದೇವಾ.
ನಿಮ್ಮ ಸಂಗನ ಬಸವಣ್ಣ ಬಂದು ಮರ್ತ್ಯದಲ್ಲಿ
ಮಹಾಮನೆಯ ಕಟ್ಟಿದರೆ ಮತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತ್ತು.

ಲಿಂಗಾಯತ ಧರ್ಮದಲ್ಲಿ ಏನುಂಟು ಏನಿಲ್ಲ?

–ರಂಜಾನ್ ದರ್ಗಾ

ಲಿಂಗವಂತ ಧರ್ಮದ ಬಹುಪಾಲು ಅನುಯಾಯಿಗಳು ಕಾಲದ ಪ್ರವಾಹಕ್ಕೆ ಸಿಲುಕಿ ತಮ್ಮ ಧರ್ಮದ ಮೂಲಸತ್ತ್ವದಿಂದ ತಮಗರಿಯದಂತೆಯೆ ದೂರ ಸಾಗುತ್ತಿದ್ದಾರೆ. ಬಹುಶಃ ಜಗತ್ತಿನ ವಿವಿಧ ಧರ್ಮಗಳ ಅನುಯಾಯಿಗಳನೇಕರು ಇಂಥ ವಿಷಮಸ್ಥಿತಿಯ ಗೊಂದಲಗಳ ಮಧ್ಯೆ ಮುಂದುವರಿಯುತ್ತಿದ್ದಾರೆ. ವೈಜ್ಞಾನಿಕ ಮನೋಭಾವದಿಂದ ಕೂಡಿದ ಕಾಯಕಜೀವಿ ಶರಣರ ಬದುಕಿನ ಕ್ರಮದ ಮೂಲಕ ಜೀವನವಿಧಾನವಾದಂಥ ಲಿಂಗವಂತ ಧರ್ಮದ ತಿರುಳನ್ನು ಇಂದು ಪ್ರತಿಯೊಬ್ಬರು ಅರಿತುಕೊಳ್ಳುವುದು ಅವಶ್ಯವಾಗಿದೆ. ಆ ಮೂಲಕ ಹಿಂಸೆ, ಸುಲಿಗೆ ಮತ್ತು ಅಸಮಾನತೆಗಳಿಲ್ಲದ ಶಾಂತಿಯುತವಾದ ಸಮೃದ್ಧ ಬದುಕನ್ನು ಪಡೆಯಬೇಕಿದೆ. ಈ ಹಿನ್ನೆಲೆಯಲ್ಲಿ ಲಿಂಗವಂತ ಧರ್ಮಕ್ಕೆ ಸಂಬಂದಿಸಿದ ಕೆಲವೊಂದು ಮುಖ್ಯ ಪ್ರಶ್ನೆಗಳಿಗೆ ಉತ್ತರಿಸುವುದು ಅವಶ್ಯವಾಗಿದೆ.

ಲಿಂಗವಂತ ಧರ್ಮದ ಮೂಲಾಧಾರ ಯಾವುದು?

ಕಾಯಕವೇ ಲಿಂಗವಂತ ಧರ್ಮದ ಮೂಲಾಧಾರವಾಗಿದೆ. ಇಡೀ ನಿಸರ್ಗ ಕಾಯಕದ ಉತ್ಪಾದನೆಯಾಗಿದೆ. ಅಂತೆಯೆ "ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು" ಎಂದು ಹೇಳುವ ಮೂಲಕ ಆಯ್ದಕ್ಕಿ ಮಾರಯ್ಯನವರು 'ಕಾಯಕವೇ ಕೈಲಾಸ' ಎಂದು ತಿಳಿಸಿದ್ದಾರೆ.

'ಲೋಕದ ಚೇಷ್ಟೆಗೆ ರವಿ ಬೀಜ' ಎಂದು ಅಕ್ಕಮಹಾದೇವಿ ಹೇಳುತ್ತಾಳೆ. ಸೃಷ್ಟಿ ರೂಪುಗೊಳ್ಳುವ ಕ್ರಿಯೆಯಲ್ಲಿ ಸೂರ್ಯನ ಪಾತ್ರವನ್ನು ಅಕ್ಕ ಸೂಚಿಸುತ್ತಾಳೆ. ಸೂರ್ಯನದು ಬೆಳಕು ಕೊಡುವ ಕಾಯಕ. ಚಂದ್ರನದು ಬೆಳದಿಂಗಳು ಕೊಡುವ ಕಾಯಕ. ವಾಯುವಿನದು ಸೃಷ್ಟಿಯನ್ನು ಜೀವಂತವಾಗಿಡುವ ಕಾಯಕ, ಭೂಮಿ ಮತ್ತು ಜಲಕ್ಕೆ ನಮ್ಮೆಲ್ಲರನ್ನು ಸಲಹುವ ಕಾಯಕ. ಮೋಡಗಳಿಗೆ ಮಳೆ ಸುರಿಸುವ ಕಾಯಕ, ಲೋಕಕ್ಕೆ ನೀರುಣಿಸುತ್ತ ಸಮುದ್ರ ಸೇರಿ ಉಪ್ಪಿನಾಂಶವನ್ನು ಸಮತೋಲನದಲ್ಲಿ ಇಡುವ ಮೂಲಕ ಜಲಚರಗಳನ್ನು ರಕ್ಷಿಸುವ ಕಾಯಕ ನದಿಯದು. ಹೀಗೆ ಕಾಯಕವು ನಿಸರ್ಗ ಧರ್ಮವಾಗಿದೆ. ಈ ಪ್ರಕಾರ ಲಿಂಗವಂತ ಧರ್ಮವು ನಿಸರ್ಗಧರ್ಮವಾಗಿರುವುದರಿಂದ ಕಾಯಕವು ಅದರ ಮೂಲಾಧಾರವಾಗಿದೆ. ಬಸವಧರ್ಮ ಎಂಬ ಲಿಂಗವಂತ ಧರ್ಮವು ಕಾಯಕ ಪ್ರಧಾನ ಧರ್ಮವಾಗಿರುವುದರಿಂದ ಕಾಯಕ ಜೀವಿಗಳೇ ಈ ಧರ್ಮದ ಮೂಲಪುರುಷರು.

ಬಸವಣ್ಣನವರ ಅನುಭವದ ಪಾತ್ರೆಯನ್ನು ತುಂಬಿಸಿದವರೇ ಕಾಯಕಜೀವಿಗಳು. "ಭಕ್ತಿ ಇಲ್ಲದ ಬಡವ ನಾನಯ್ಯಾ ಕಕ್ಕಯ್ಯನ ಮನೆಯಲ್ಲೂ ಬೇಡಿದೆ; ಚೆನ್ನಯ್ಯನ ಮನೆಯಲ್ಲೂ ಬೇಡಿದೆ" ಎಂದು ಬಸವಣ್ಣನವರು ಮನದುಂಬಿ ಹೇಳಿದ್ದಾರೆ. ಉನ್ನತ ಕುಲ, ಉನ್ನತ ಶಿಕ್ಷಣ, ಉನ್ನತ ವರ್ಗ ಮತ್ತು ಪ್ರಧಾನ ಮಂತ್ರಿಯಂಥ ಉನ್ನತ ಹುದ್ದೆಯನ್ನು ಹೊಂದಿ

ಕ್ರಿಯಾಶೀಲರಾಗಿದ್ದ ಬಸವಣ್ಣನವರು ಇವುಗಳನ್ನೆಲ್ಲ ಲೆಕ್ಕಿಸದೆ ಹೀಗೆ ಕೆಳಜಾತೀಕರಣಕ್ಕೆ ಒಳಗಾಗಿ ಬಸವಳಿದ ಜನರ ಕಣ್ಣೀರನ್ನು ಒರೆಸಲು ಮುಂದಾದರು. ಸಕಲ ವೇದ, ಶಾಸ್ತ್ರ, ಉಪನಿಷತ್, ಪುರಾಣ ಮತ್ತು ಆಗಮಗಳಲ್ಲಿ ಪಾರಂಗತರಾಗಿದ್ದರೂ ಹೊಸ ಜಗತ್ತಿನ ಸಿದ್ಧಾಂತ ರೂಪಿಸುವಲ್ಲಿ ಕಾಯಕಜೀವಿಗಳ ಅನುಭವವನ್ನೇ ಪ್ರಮಾಣವಾಗಿ ಸ್ವೀಕರಿಸಿದರು. ಲಕ್ಷಾಂತರ ಜನರ ಅನುಭವದಿಂದ ಒಂದು ನಾಗರೀಕತೆಯ ನಿರ್ಮಾಣವಾಗುವುದು. ಅವರೆಲ್ಲರ ಅನುಭವದ ಸಾರವಾದ ಅನುಭಾವದಿಂದ ಮಾನವಸಂಸ್ಕೃತಿ ಅರಳುವುದು. ಹೀಗೆ ನಿರ್ಮಾಣವಾದ ನಾಗರೀಕತೆಯಲ್ಲಿ ಅರಳಿದ ಸಂಸ್ಕೃತಿಯಲ್ಲಿ ವಿಶ್ವಮಾನವನ ಉದಯವಾಗುವುದು. ನಮ್ಮ ಬಸವಾದಿ ಶರಣರು ಅಂಥ ವಿಶ್ವಮಾನವರು.

ಕಾಯಕ, ಪ್ರಸಾದ ಮತ್ತು ದಾಸೋಹ ವ್ಯವಸ್ಥೆಯನ್ನು ಲಿಂಗವಂತ ಧರ್ಮ ಹೊಂದಿದೆ. ಗುರು, ಲಿಂಗ ಮತ್ತು ಜಂಗಮಕ್ಕೆಲ್ಲ ಕಾಯಕ ಅವಶ್ಯವಾಗಿದೆ. ಲಿಂಗವಂತ ಧರ್ಮದಲ್ಲಿ ಅರಿವೇ ಗುರು. ಅರಿವಿನ ಮೂಲವಾದ ಸಮತಾ ತತ್ತ್ವವೇ ಲಿಂಗತತ್ತ್ವ. ಸಕಲ ಜೀವಾತ್ಮರಿಂದ ಕೂಡಿರುವ ಲೋಕವೇ ಜಂಗಮ. ಕಾಯಕದಿಂದ ಪಡೆದದ್ದನ್ನು ಲಿಂಗಪ್ರಸಾದವೆಂದು ಸ್ವೀಕರಿಸಬೇಕು. ಆ ಪಡೆದದ್ದನ್ನು ಲಿಂಗದ ವಿರಾಟ್ ಸ್ವರೂಪವಾದ ಸಮಾಜವೆಂಬ ಜಂಗಮಕ್ಕೆ ದಾಸೋಹ ಎಂಬ ಸಾಮಾಜಿಕ ವಿತರಣಾ ವ್ಯವಸ್ಥೆ ಮೂಲಕ ಕೊಟ್ಟು ಅಸಮಾನತೆಯನ್ನು ತೊಡೆದು ಹಾಕಬೇಕು.

ಹೀಗೆ ಕಾಯಕವು ಲಿಂಗವಂತ ಧರ್ಮದ ಮೂಲಾಧಾರವಾಗಿದೆ. 'ಮಾನವನ ಎಲ್ಲ ಇರುವಿಕೆಗೆ ದುಡಿಮೆಯೆ ಮೊಟ್ಟ ಮೊದಲ ಆಧಾರ. ಇದು ಎಷ್ಟರಮಟ್ಟಿಗೆ ನಿಜವೆಂದರೆ ಒಂದರ್ಥದಲ್ಲಿ ದುಡಿಮೆಯೆ ಮನುಷ್ಯನನ್ನು ಸೃಷ್ಟಿಸಿತು' ಎಂದು 19ನೇ ಶತಮಾನದ ಫ್ರೆಡ್ರಿಕ್ ಎಂಗೆಲ್ಸ್ ಅವರು 'ದ ಪಾರ್ಟ್ ಪ್ಲೇಯ್ಡ್ ಬೈ ಲೇಬರ್ ಇನ್ ದ ಟ್ರಾಂಜಿಶನ್ ಫ್ರಾಮ್ ಏಪ್ ಟು ಮ್ಯಾನ್' ಎಂಬ ಪುಸ್ತಕದಲ್ಲಿ ಬರೆದಿದ್ದಾರೆ. ವಾನರ ನರ ಆಗುವಲ್ಲಿ ದುಡಿಮೆಯ ಪಾತ್ರ ಹಿರಿದಾಗಿದೆ. ಆತನ ಅನುಭವ ಮತ್ತು ಅನುಭಾವಕ್ಕೆ ಕೂಡ ದುಡಿಮೆಯೆ ಮೂಲ ಕಾರಣವಾಗಿದೆ ಎಂದು ಎಂಗೆಲ್ಸ್ ವಿವರಿಸಿದ್ದಾರೆ. ಕಾರ್ಲ್ ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರು 19ನೇ ಶತಮಾನದಲ್ಲಿ ರೂಪಿಸಿದ ಸಮತಾವಾದ ಕೂಡ ದುಡಿಯುವ ವರ್ಗದ ಅನುಭವದ ಮೇಲೆಯೆ ನಿಂತಿದೆ.

ಲಿಂಗವಂತ ಧರ್ಮದಲ್ಲಿ ಪೂಜಾರ್ಹ ವಸ್ತು ಯಾವುದು?

ಲಿಂಗವಂತ ಧರ್ಮದಲ್ಲಿ ಇಷ್ಟಲಿಂಗ ಮಾತ್ರ ಪೂಜಾರ್ಹ ವಸ್ತು. ಇಷ್ಟಲಿಂಗವು ಅರಿವಿನ ಕುರುಹು ಆಗಿದೆ. "ಅರಿಯದ ಕಾರಣ ಕುರುಹುವಿಡಿವೆನಲ್ಲದೆ ಅರಿದ ಬಳಿಕ ಇನ್ನೇನೊ?" ಎಂದು ಅಲ್ಲಮಪ್ರಭುಗಳು ಪ್ರಶ್ನಿಸುತ್ತಾರೆ. ಇಷ್ಟಲಿಂಗವೇ ದೇವರಲ್ಲ. ಲಿಂಗದೇವನ ಕುರುಹು. ಲಿಂಗವಂತ ಧರ್ಮದಲ್ಲಿ ದೇವರ ಹೆಸರು ಲಿಂಗದೇವ ಎಂದಿದೆ. ಶರಣರು ಶಿವ ಮುಂತಾದ ಶಬ್ದಗಳನ್ನು ಕೇವಲ ರೂಢಿಗತವಾಗಿ ಬಳಸಿದ್ದಾರೆ. ಇದರ ಅರ್ಥ ಕೂಡಲಸಂಗಮದೇವ ವಚನಾಂಕಿತವನ್ನು ಲಿಂಗದೇವ ಎಂದು ತಿದ್ದಬೇಕು ಎಂದಲ್ಲ. ಆ

ಕೂಡಲಸಂಗಮದೇವ ವಚನಾಂಕಿತವು ಬಸವಣ್ಣನವರ ಸಿಗ್ನೆಚರ್ ಆಗಿದೆ ಎಂಬುದನ್ನು ಮರೆಯಬಾರದು. ಕೂಡಲಸಂಗಮದೇವನಿಗೆ ಎಲ್ಲಿಯೂ ಗುಡಿ ಇಲ್ಲ. ಕೂಡಲಸಂಗಮದಲ್ಲಿರುವುದು ಸಂಗಮೇಶ್ವರ/ಸಂಗಮನಾಥ ದೇವಸ್ಥಾನವೇ ಹೊರತು ಕೂಡಲಸಂಗಮ ದೇವಸ್ಥಾನವಲ್ಲ. "ತೋರಲಿಲ್ಲದ ಸಿಂಹಾಸನದ ಮೇಲೆ ಹೇಳಬಾರದ ಘನವು ಬಂದೆರಗಿದಡೆ ತೋರಿ ಮೆರೆವ ಸಂಗಮನಾಥನು ಎದ್ದು ಹೋದನು" ಎಂದು ಬಸವಣ್ಣನವರು ಕೂಡಲಸಂಗಮದಲ್ಲಿನ ಸ್ಥಾವರಲಿಂಗವನ್ನು ಅಲ್ಲಗಳೆದಿದ್ದಾರೆ. ಶರಣರು ತಮ್ಮೊಳಗಿನ ಲಿಂಗದೇವನ ಅನುಸಂಧಾನಕ್ಕಾಗಿ ಇಷ್ಟಲಿಂಗವೆಂಬ ಮಾಧ್ಯಮವನ್ನು ಬಳಸಿದರು. ಆ ಮೂಲಕ ತಮ್ಮೊಳಗೇ ಇರುವ ಮಹಾಘನದ ಜೊತೆ ಒಂದಾದರು. ಹೀಗೆ ಒಂದಾಗುವುದೇ ಇಷ್ಟಲಿಂಗಯೋಗ (ಶಿವಯೋಗ). ಆದ್ದರಿಂದ ಲಿಂಗವಂತ ಧರ್ಮದಲ್ಲಿ ಪೂಜೆ ಇಲ್ಲ. ಆದರೆ ಪೂಜೆ ಮಾಡಿಕೊಳ್ಳುವುದು ಇದೆ. ಪೂಜೆ ಮಾಡಿಕೊಳ್ಳುವುದೆಂದರೆ ತಮ್ಮೊಳಗಿನ ಘನದ ಜೊತೆ ಶೂನ್ಯ (ಪೂಜಿ) ಆಗುವುದು. ಹೀಗೆ ಶರಣರು ತಮ್ಮನ್ನು ತಾವು ಶೂನ್ಯ ಮಾಡಿಕೊಳ್ಳುತ್ತಿದ್ದರು. ಲಿಂಗವಂತ ಜ್ಞಾನಿಗಳು 'ಪೂಜೆ ಮಾಡಿರಿ' ಎಂದು ಹೇಳುವುದಿಲ್ಲ. 'ಪೂಜೆ ಮಾಡಿಕೊಳ್ಳಿರಿ' ಎಂದು ಹೇಳುತ್ತಾರೆ.

ದೇವರು ಅಗಮ್ಯ, ಅಗೋಚರ, ಅಪ್ರತಿಮ ಮತ್ತು ಅಪ್ರಮಾಣ ಎಂದು ಬಸವಣ್ಣನವರು ಹೇಳಿದ್ದಾರೆ. ರೂಪಿಲ್ಲದ ವಿಶ್ವಚೇತನವಾಗಿರುವ ಇಷ್ಟಲಿಂಗವು ಲಿಂಗದೇವ ಎಂಬ ಅರಿವಿನ ಕುರುಹು ಹೊರತಾಗಿ ಮೂರ್ತಿ ಅಲ್ಲ. ಆದ್ದರಿಂದ ಲಿಂಗವಂತ ಧರ್ಮದಲ್ಲಿ ಮೂರ್ತಿಪೂಜೆ ನಿಷಿದ್ಧ. ಮೂರ್ತಿಯೇ ಇಲ್ಲವೆಂದಮೇಲೆ ಮಂದಿರದ ಪ್ರಶ್ನೆಯೇ ಇಲ್ಲ. ದೇಹವೇ ದೇಗುಲವಾಗಿರುವುದರಿಂದ ದೇವರು ನಮ್ಮೊಳಗೇ ಇದ್ದಾನೆ. ನಾವೆಲ್ಲ ಜೀವಂತ ಮಂದಿರಗಳೇ ಆಗಿದ್ದೇವೆ.

ಸಮಷ್ಟಿಯನ್ನು ವ್ಯಷ್ಟಿಯಲ್ಲಿ ಒಂದಾಗಿಸಿ ಲೋಕಕಲ್ಯಾಣದಲ್ಲಿ ತೊಡಗುವುದೇ ಲಿಂಗವಂತನು ದೇವರನ್ನು ಮೆಚ್ಚಿಸುವ ಕ್ರಮ. ಲಿಂಗಾಯತ ಎಂದರೆ 'ಲಿಂಗಧಾರಣೆ ಮಾಡಿದವನು' ಎಂಬುದು ಸಾಮಾನ್ಯ ಅರ್ಥವಾದರೆ. 'ಲಿಂಗಕ್ಕೆ ಪ್ರಿಯನಾದವನು' ಎಂಬುದು ಅದರ ತಾತ್ತ್ವಿಕ ಅರ್ಥವಾಗಿದೆ. (ಆಯತ ಎಂದರೆ ಪ್ರಿಯ ಎಂಬ ಅರ್ಥವೂ ಇದೆ.)

ಈ ಧರ್ಮದಲ್ಲಿ ಬಸವಾದಿ ಶರಣರು ಗೌರವಾರ್ಹವಾಗಿದ್ದಾರೆ. ಬಸವಾದಿ ಶರಣರ ಪಾದಸ್ಪರ್ಶದಿಂದಾಗಿ ಬಾಗೇವಾಡಿ, ಕೂಡಲಸಂಗಮ, ಕಲ್ಯಾಣ ಮುಂತಾದವು ಸ್ಫೂರ್ತಿಯ ತಾಣಗಳಾಗಿವೆ. ಶರಣರಿಗೆ ಇಡೀ ಭೂಲೋಕವೇ ಶ್ರದ್ಧಾ ಕೇಂದ್ರವಾಗಿದೆ. ಏಕೆಂದರೆ ಇದು ಕರ್ತಾರನ ಕಮ್ಮಟವಾಗಿದೆ.

ಲಿಂಗವಂತ ಧರ್ಮದಲ್ಲಿ ಜಾತಿಗಳಿವೆಯೆ?

ಲಿಂಗವಂತ ಧರ್ಮ ನಿರ್ಜಾತಿ ಧರ್ಮವಾಗಿದೆ. ಮನುವಾದಿಗಳ ವರ್ಣ, ಜಾತಿ ಮತ್ತು ಉಪಜಾತಿಗಳನ್ನು ನಿರ್ನಾಮ ಮಾಡುವ ಉದ್ದೇಶದಿಂದಲೇ ಈ ಧರ್ಮ ಜನ್ಮತಾಳಿದೆ.

ದುರಂತವೆಂದರೆ ಈ ಧರ್ಮ ಕಾಲಾನುಕ್ರಮದಲ್ಲಿ ಉಪಜಾತಿಗಳಿಂದ ತುಂಬಿಹೋಗಿದೆ. ಲಿಂಗಾಯತರು ಯಾವಾಗ ಹಿಂದೂ-ಲಿಂಗಾಯತರಾದರೂ ಆವಾಗಲೇ ಅವರು ತಮ್ಮ ಸ್ವತಂತ್ರ ಧರ್ಮವನ್ನು ಕಳೆದುಕೊಂಡು ಹಿಂದೂ ಧರ್ಮದೊಳಗಿನ ಲಿಂಗಾಯತ ಜಾತಿಯಾದರು. ಈ ದುರಂತ ಎಲ್ಲಿಯವರೆಗೆ ಮುಂದುವರಿಯಿತೆಂದರೆ ಜಾತಿಗಳಿಲ್ಲದ ಲಿಂಗಾಯತ ಧರ್ಮಕ್ಕೆ ಸಂಬಂಧಿಸಿದ ಕಾಯಕಗಳು ಉಪಜಾತಿಗಳಾಗಿ ರೂಪುಗೊಂಡವು. ಸ್ವತಂತ್ರ ಲಿಂಗವಂತ ಧರ್ಮದಲ್ಲಿ ಸಮಗಾರ ಹರಳಯ್ಯನವರು ಎಂದರೆ ಸಮಗಾರ ಕಾಯಕದ ಲಿಂಗವಂತ ಹರಳಯ್ಯನವರು. ಆದರೆ ಲಿಂಗಾಯತವು ಹಿಂದೂ ಧರ್ಮದ ಭಾಗವಾದಾಗ ಸಮಗಾರ ಎಂಬುದು ಜಾತಿಯಾಯಿತು. ಹೀಗೆ ಲಿಂಗಾಯತ ಜಾತಿಯಾದ ನಂತರ ಜಂಗಮ, ಆರಾಧ್ಯ, ಬಣಜಿಗ, ಪಂಚಮಸಾಲಿ, ಕುಡು ಒಕ್ಕಲಿಗ, ಸಾದರ, ನೊಣಬ, ನಗರ್ತ, ಗೌಡಲಿಂಗಾಯತ, ಲಿಂಗಾಯತ ರೆಡ್ಡಿ, ಕುರುಹಿನಶೆಟ್ಟಿ, ಗಾಣಿಗ, ಬಣಗಾರ, ನೇಕಾರ, ಶಿವಸಿಂಪಿ, ಶೀಲವಂತ, ಹೂಗಾರ ಮುಂತಾದ ಉಪಜಾತಿಗಳು ಹುಟ್ಟಿಕೊಂಡಾಗ ಕಾಯಕದ ಪ್ರಾಮುಖ್ಯ ಹೊರಟುಹೋಯಿತು.

ಮೈಸೂರು ರಾಜ್ಯದ 1891ನೇ ಜನಗಣತಿಯ ಪ್ರಕಾರ ಲಿಂಗಾಯತದಲ್ಲಿ 38 ಉಪಜಾತಿಗಳಿವೆ. 1901ರ ಬಾಂಬೆ-ಕರ್ನಾಟಕದ ಜನಗಣತಿಯ ಪ್ರಕಾರ 43 ಉಪಜಾತಿಗಳಿವೆ.

ಲಿಂಗಾಯತರು ತಮ್ಮ ಸ್ವತಂತ್ರ ಧರ್ಮವನ್ನು ಮರೆತು ಉಪಜಾತಿಗಳಲ್ಲಿ ಒಡೆದು ಹೋದಾಗ ಸಹಜವಾಗಿಯೆ ಅವರ ತಲೆಯಲ್ಲಿ ಮನು ವಾಸ ಮಾಡುವನು. ಆಗ ಬಸವಣ್ಣ ನಾಲಿಗೆಯ ಮೇಲೆ ಮಾತ್ರ ಇರುತ್ತಾರೆ. ಲಿಂಗವಂತ ಧರ್ಮ ಉಳಿಯಬೇಕಾದರೆ ಲಿಂಗಾಯತರು ಜಾತಿಗಳನ್ನು ನಿರ್ನಾಮ ಮಾಡುವುದು ಅವಶ್ಯವಾಗಿದೆ. ಇಷ್ಟಲಿಂಗ ಪೂಜಕರು ವಿವಿಧ ಉಪಜಾತಿಗಳ ಮಧ್ಯದ ಬೇಲಿಗಳನ್ನು ಕಿತ್ತೆಸೆಯಬೇಕು. ಉಪಜಾತಿಗಳ ಮಧ್ಯೆ ಯುದ್ಧೋಪಾದಿಯಲ್ಲಿ ರಕ್ತಸಂಬಂಧ ಸಾಧಿಸುವುದರ ಮೂಲಕ ಲಿಂಗಾಯತ ಒಂದು ಸ್ವತಂತ್ರ ಧರ್ಮ ಎಂಬ ಸತ್ಯವನ್ನು ಜಗತ್ತಿಗೆ ಸಾರುತ್ತ ಯಶಸ್ಸನ್ನು ಸಾಧಿಸಿದಾಗ ಮಾತ್ರ ಬಸವಾದಿ ಶರಣರು ಸ್ಥಾಪಿಸಿದ ಲಿಂಗವಂತ ಧರ್ಮ ಉಳಿಯಲು ಸಾಧ್ಯ. ಇಲ್ಲದಿದ್ದರೆ ಜಾತೀಯತೆ ಮತ್ತು ಅಸ್ಪೃಶ್ಯತೆಯನ್ನು ಆಚರಿಸುವುದರೊಂದಿಗೆ ಹೋಮ ಹವನಗಳಿಗೆ ಬಲಿಯಾಗುತ್ತ ಗುಡಿ ಗುಡಿ ಸುತ್ತುವ ಸೋ ಕಾಲ್ಡ್ ಲಿಂಗಾಯತರನ್ನೇ ನೋಡುವ ದುರಂತ ಸ್ಥಿತಿಯನ್ನು ತಲುಪಬೇಕಾಗುತ್ತದೆ.

ಅಷ್ಟಾವರಣ, ಷಟ್‌ಸ್ಥಲ ಮತ್ತು ಪಂಚಾಚಾರ ಅಂದರೆ?

ಇವು ಲಿಂಗವಂತ ಧರ್ಮಾಚರಣೆಯ ಮೂರು ಅವಿಭಾಜ್ಯ ಅಂಗಗಳು. ಆದರೆ ಇವೆಲ್ಲ 12ನೇ ಶತಮಾನದ ಮೊದಲೇ ಇದ್ದವು ಎಂದು ಪಟ್ಟಭದ್ರ ಹಿತಾಸಕ್ತಿಗಳು ಪ್ರತಿಪಾದಿಸುತ್ತಿವೆ.

ಕಳೆದ 800 ವರ್ಷಗಳ ಅವಧಿಯಲ್ಲಿ ಇಂಥ ಅನೇಕ ಅನ್ಯಾಯಗಳನ್ನು ಶರಣರ ಲಿಂಗವಂತ ಧರ್ಮದ ಮೇಲೆ ಮಾಡಲಾಗಿದೆ. ಹೀಗೆ ಹಿಂದಿನ ಗ್ರಂಥಗಳಲ್ಲಿ ಈ ವಿಚಾರಗಳನ್ನು ಪ್ರಜ್ಞಾಪೂರ್ವಕವಾಗಿ ಸೇರಿಸಿದ್ದನ್ನು ಎತ್ತಿ ತೋರಿಸುವ ಪಟ್ಟಭದ್ರ ಹಿತಾಸಕ್ತಿಗಳು 'ಬಸವಣ್ಣನವರು ಇಷ್ಟಲಿಂಗದ ಜನಕರು' ಎಂಬುದನ್ನೂ ಒಪ್ಪಿಕೊಳ್ಳುವುದಿಲ್ಲ. ಇಷ್ಟಲಿಂಗ ಕೂಡ ಮೊದಲೇ ಇತ್ತು ಎಂದು ವಾದಿಸುತ್ತಾರೆ! "ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತು ಶಿವನೆಂದು ವಂದಿಸಿ, ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ" ಎಂದು ಹೇಳುವ ಬಸವಣ್ಣನವರು ಇಷ್ಟಲಿಂಗದ ಮೂಲಕ ಜಾತಿವ್ಯವಸ್ಥೆಗೆ ಕೊಡಲಿ ಪೆಟ್ಟು ಕೊಟ್ಟಿದ್ದಾರೆ. ಆದರೆ ಮೇಲು ಕೀಳುಗಳಲ್ಲಿ ನಂಬಿಕೆ ಇರುವ ಲಿಂಗೋದ್ಭವವಾದಿಗಳು ಬಸವಣ್ಣನವರಿಗೆ ಇಷ್ಟಲಿಂಗ ಕೊಟ್ಟವರು ತಮ್ಮ ಆಚಾರ್ಯರೇ ಎಂದು ಸಾಧಿಸಲು ವಿಫಲ ಪ್ರಯತ್ನ ಮಾಡುತ್ತಲೇ ಇದ್ದಾರೆ.

'ಗುರು, ಲಿಂಗ, ಜಂಗಮ, ಪಾದೋದಕ (ಜ್ಞಾನೋದಕ), ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ' ಇವು ಅಷ್ಟಾವರಣಗಳು. ಐಹಿಕ ಜಗತ್ತಿನ ವಸ್ತುಮೋಹದಿಂದ ರಕ್ಷಿಸುವಂಥವು. 'ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ' ಇವು ಷಟ್‌ಸ್ಥಲಗಳು. ಲಿಂಗವಂತರ ಮಾನಸಿಕ ಮಜಲುಗಳನ್ನು ಸೂಚಿಸುತ್ತವೆ. ವ್ಯಷ್ಟಿಯಿಂದ ಸಮಷ್ಟಿಪ್ರಜ್ಞೆ ವರೆಗಿನ ವ್ಯಕ್ತಿತ್ವ ವಿಕಸನವನ್ನುಂಟು ಮಾಡುವ ಸ್ಥಲಗಳಿವು. ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ ಇವು ಪಂಚಾಚಾರಗಳು. ಇವುಗಳನ್ನು ಆಚರಣೆಯಲ್ಲಿ ತರುವುದೇ ಲಿಂಗವಂತರ ಕರ್ತವ್ಯವಾಗಿದೆ.

ಇಷ್ಟಲಿಂಗದಲ್ಲಿ ನಂಬಿಕೆ ಇಟ್ಟು ಏಕದೇವೋಪಾಸಕರಾಗುವುದು ಲಿಂಗಾಚಾರ. ಪರಹಿತ ಬಯಸುವುದು ಸದಾಚಾರ. ಜಾತಿಭೇದ ಮಾಡದಿರುವುದು ಶಿವಾಚಾರ. ಶಿವಭಕ್ತರ ನಿಂದೆಯನ್ನು ಸಹಿಸದಿರುವುದು ಗಣಾಚಾರ. ಶಿವಭಕ್ತರಲ್ಲಿ ಸೇವಾಭಾವದಿಂದ ಇರುವುದು ಭೃತ್ಯಾಚಾರ.

ಕಲ್ಯಾಣ ಕಿರಣ ಓದುಗರಿಗೆ ಸೂಚನೆ

ಚಂದಾ ಅವಧಿ ಮುಗಿದವರಿಗೆ ಸೂಚನೆ ಕಳಿಸಲಾಗುವುದು. ತಕ್ಷಣ ಹಣ ಕಳಿಸಿರಿ, ನವೀಕರಿಸಿರಿ. ನಿಮ್ಮ ಮೊಬೈಲ್ ಸಂಖ್ಯೆ ಮರೆಯದೆ ತಿಳಿಸಿರಿ.

ವಿ.ಸೂ: ಚಂದಾ ಕಳಿಸಲು ಅನುಕೂಲ ಇಲ್ಲದವರು ಫೋನ್ ಮೂಲಕ ಪತ್ರಿಕೆ ಕಳಿಸಲು ತಿಳಿಸಿರಿ. ಶರಣ ಮೇಳ (ಕಲ್ಯಾಣ ಪರ್ವ)ದಲ್ಲಿ ಚಂದಾ ಹಣವನ್ನು ಪ್ರಾಮಾಣಿಕವಾಗಿ ಕಟ್ಟಿರಿ.

ಸಂಪರ್ಕಿಸುವ ದೂರವಾಣಿ: 9945806297

ಜನಪದ ಸಾಹಿತ್ಯದಲ್ಲಿ ಧರ್ಮಪಿತ ಬಸವಣ್ಣನವರ ವ್ಯಕ್ತಿತ್ವ.

– ಪೂಜ್ಯ ಬಸವಪ್ರಭು ಸ್ವಾಮೀಜಿ

ಈ ಜಗತ್ತಿನ ವಿಚಾರ ಸಾಹಿತ್ಯವು ಕಾಲಕಾಲಕ್ಕೆ ತನ್ನ ಅಸ್ತಿತ್ವವನ್ನು ಪಡೆದುಕೊಳ್ಳುತ್ತಾ ಸಾಗಿ, ಕೊನೆಗೆ ಪರಿಪೂರ್ಣಾವಸ್ಥೆಗೆ ತಲುಪಿದ್ದು 12ನೇ ಶತಮಾನದ ವಚನ ಸಾಹಿತ್ಯದಲ್ಲಿ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅದ್ಭುತ ಪರಿವರ್ತನೆ ಘಟ್ಟ ಮತ್ತು ತಿರುವು ಪಡೆದುಕೊಂಡಿದ್ದು ಇದೇ ಶತಮಾನದಲ್ಲಿ.

ಶತಶತಮಾನದಿಂದ ಜಿಡ್ಡುಗಟ್ಟಿದ ಸಂಪ್ರದಾಯವನ್ನು ಆಚರಿಸುತ್ತಾ, ಕೂಪಮಂಡೂಕದಂತೆ ಜೀವನ ನಡೆಸುತ್ತಿದ್ದ ಮೂಢಮತಿಯ ಪಾಂಡಿತ್ಯ ವರ್ಗ ಒಂದು ಕಡೆಯಾದರೆ, ಸತ್ತದನದ ಮಾಂಸವನ್ನು ಭಕ್ಷಿಸುತ್ತಾ ತುತ್ತುಕೂಳಿಗೂ ಪರದಾಡುವ ಶೋಷಿತ ಅಸ್ಪೃಶ್ಯವರ್ಗ ಮತ್ತೊಂದು ಕಡೆ. ಇದಕ್ಕಾಗಿ ಈ ತಾರತಮ್ಯದ ಭೇದವನ್ನು ಅಳಿಸುವುದಕ್ಕಾಗಿ ಒಂದು ಧೀಮಂತ ಶಕ್ತಿಯನ್ನು ಶೋಷಿತ ಸಮಾಜ ಜಾತಕ ಪಕ್ಷಿಯಂತೆ ಕಾಯುತ್ತಾ ಕುಳಿತ್ತಿತ್ತೇನೊ ಎನ್ನುವಂತೆ ಗುರು ಬಸವಣ್ಣನವರು ಅವತರಿಸಿ ಬಂದಂತಾಗಿದೆ. ಅದಕ್ಕಾಗಿ ಜನಪದರು ಅವರನ್ನು ಅನನ್ಯವಾಗಿ ಕೊಂಡಾಡಿದ್ದಾರೆ.

ಎಲ್ಲಾ ಬಲ್ಲಿದನಯ್ಯಾ ಕಲ್ಯಾಣ ಬಸವಯ್ಯಾ
ಚೆಲ್ಲಿದನು ತಂದು ಶಿವಬೆಳಕ॥ ನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವುದು.

ಸ್ವಾನುಭಾವದ ನುಡಿಗಳಿಂದ ಈ ಜನಪದದಲ್ಲಿ ಅವರು ಗುರು ಬಸವಣ್ಣನವರ ಬದುಕು ಸಾಧನೆಯ ವ್ಯಕ್ತಿತ್ವವನ್ನು ಸ್ವಾರಸ್ಯಕರವಾಗಿ ಚಿತ್ರಿಸಿದ್ದಾರೆ. ಇದಕ್ಕಿಂತ ಆಧಾರ ಇನ್ನೇನು ಬೇಕು? ಗುರು ಬಸವಣ್ಣನವರ ಬಹುಮುಖ ವ್ಯಕ್ತಿತ್ವಕ್ಕೆ ಸಾಕ್ಷಿ ಹಿಡಿದಂತಿದೆಯಲ್ಲವೆ? ತಮ್ಮ ಹೃದಯದಿಂದ ಹೊರಹೊಮ್ಮಿದ ಭಾಷೆಯಿಂದ ಅವರ ವ್ಯಕ್ತಿತ್ವವನ್ನು ಹಾಡಿಕೊಂಡಾಡಿದ್ದನ್ನು ನೋಡಿದರೆ, ಯಾವ ಪಾಂಡಿತ್ಯ ವರ್ಗವಾದರೂ ಒಪ್ಪಲೇ ಬೇಕಾಗಿರುವ ಸಂಗತಿ. ಮೇಲ್ವರ್ಗ ಮತ್ತು ಕೆಳವರ್ಗ ಎಂಬ ಭೇದವನ್ನು ಹೊಡೆದೋಡಿಸುವ ಗುರು ಬಸವಣ್ಣನವರ ಶ್ರಮ ಅಪಾರವಾಗಿದೆ ಎನ್ನುವದನ್ನು ಹೃದಯಂಗಮವಾಗಿ ಹೇಳಿಕೊಂಡಿದ್ದಾರೆ.

ಹೊಲೆಯ ಮಾದಿಗರೆಂಬ ಬಲೆಯ ತಾ ಕಿತ್ತೆಗೆದು
ಭಲಾರೆ ಬಸವಯ್ಯಾ ಬಸವರಸ॥ ನಿನ್ಹೆಸರು
ನೆಲೆಯಾಯಿತು ನಿತ್ಯ ಜನಪದಕೆ.

ಈ ಪದ್ಯದಲ್ಲಿ ಸರಳವಾಗಿ ಗುರು ಬಸವಣ್ಣನವರು ಆರ್ಯನ್ನರು ಸೃಷ್ಟಿಸಿದ ಹೊಲೆಯ ಮಾದಿಗರೆಂಬ ಜಾತಿಯತೆಯ ಬಲೆಯನ್ನು ಕಿತ್ತುಹಾಕಿ ಅವರಿಗೆ ಧಾರ್ಮಿಕ, ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ಕೊಟ್ಟು ಅವರವರ ಕಾಯಕಕ್ಕೆ ದೈವತ್ವದ ಮೆರಗನ್ನು ಕೊಟ್ಟರೆಂತಲೇ ಜನಪದರು ಅವರ ಹೆಸರನ್ನು ಶಾಶ್ವತವಾಗಿ ಭೂಮಿಯ ಮೇಲೆ ನೆಲೆ ನಿಲ್ಲುವಂತೆ ಮಾಡಿದ್ದಾರೆ.

"ಇತಿಹಾಸವನ್ನು ತಿಳಿದುಕೊಂಡವ ಇತಿಹಾಸವನ್ನು ಸೃಷ್ಟಿ ಮಾಡಬಲ್ಲನು" ಎಂಬ ಪ್ಲೇಟೋನ ನುಡಿ ಅಕ್ಷರಶ: ಸತ್ಯವೆನಿಸುತ್ತದೆ. ಈ ಜಗತ್ತಿನಲ್ಲಿ ಕಾಲಕಾಲಕ್ಕೆ ಒಬ್ಬೊಬ್ಬ ಪ್ರವಾದಿ ಬಂದು ಹೋಗಿದ್ದಾರೆ. ಅವರು ಆಯಾ ಪರಿಸರ, ಪರಿಸ್ಥಿತಿಗೆ ತಕ್ಕಂತೆ ಒಂದೊಂದು ಧರ್ಮವನ್ನು ರೂಪಿಸಿಕೊಟ್ಟಿದ್ದಾರೆ. ಅವರಿಗೆ ಅಷ್ಟು ದೊಡ್ಡ ಸವಾಲಾಗಿ ಪರಿಣಮಿಸಲಿಲ್ಲ. ಆದರೆ ಪಾಪಸ್ ಕಳ್ಳಿಯಂತೆ ಒಳಗು-ಹೊರಗು ಮುಳ್ಳನ್ನು ತುಂಬಿಕೊಂಡ ವೈದಿಕ ಧರ್ಮ ಮತ್ತು ಶೈವ ಪದ್ಧತಿಗಳು ಮನುಕುಲದ ಒಳಿತಿಗೆ ಮಾರಕವಾಗಿದ್ದವು. ಪಾಪಸ್ ಕಳ್ಳಿಯ ಮುಳ್ಳನ್ನು ತೆಗೆದು ಸೂಕ್ಷ್ಮವಾಗಿ ಒಳಗಿದ್ದ ಹಣ್ಣನ್ನು ತಿನ್ನಬೇಕಾದರೆ ಸಾಕುಬೇಕಾಗುತ್ತದೆ. ಒಂದು ವೇಳೆ ಗಂಟಲಕ್ಕೆ ಮುಳ್ಳು ಚುಚ್ಚಿದರೆ ಅದರ ಪರಿಪಾಟಲು ತಿಂದವರಿಗೆ ಗೊತ್ತು. ಹಾಗೆಯೇ ಆಗೊಂದು ಈಗೊಂದು "ಏಕಂ ಸತ್ ವಿಪ್ರಬಹುದಾ ವದಂತಿ," "ವಿದ್ಯಾವಿನಯ ಸಂಪನ್ನೇ, ಬ್ರಾಹ್ಮಣೇ ಗವಿ ಹಸ್ತಿನಿ ಶುನಿಚೈವ ಶ್ವಪಾಕೇಚ ಪಂಡಿತಾ ಸಮದರ್ಶಿನಾ" ಎಂಬ ನುಡಿಗಳನ್ನು ಬಿಟ್ಟರೆ (ಈ ಶ್ಲೋಕಗಳು ಕಂಠ ಪಾಠ ಮಾಡಲು ಮಾತ್ರ ಸೀಮಿತವಾಗಿದ್ದವು) ಪರಿಪೂರ್ಣವಾಗಿ ಆ ತತ್ವವನ್ನು ಜನಸಾಮಾನ್ಯರು ಅಳವಡಿಸಿಕೊಳ್ಳಲು ಸಾಧ್ಯವಿರಲಿಲ್ಲ. ಹೀಗಾಗಿ, ಸಮಗ್ರವಾಗಿ ಇವುಗಳನ್ನು ಆಧ್ಯಯನಿಸಿದ ಗುರು ಬಸವಣ್ಣನವರಿಗೆ ಹೊಸದೊಂದು ಧರ್ಮವನ್ನು ಕೊಡುವಲ್ಲಿ ಅವರಿಗೆ ದೊಡ್ಡ ಸವಾಲಾಗಿಯೇ ಪರಿಣಮಿಸಿತಲ್ಲದೆ, ಅದು ಅಷ್ಟು ಸುಲಭವಾಗಿರಲಿಲ್ಲ. ಇದನ್ನು ಗಮನಸಿದಾಗ ಪ್ಲೇಟೋನ ಮಾತು ಗುರು ಬಸವಣ್ಣನವರಿಗೆ ಹೇಳಿ ಮಾಡಿಸಿದಂತಿದೆ. ಅವರು ಯಾವುದನ್ನು ಸಮಗ್ರವಾಗಿ ತಿಳಿದುಕೊಳ್ಳದೆ, ಯಾವುದನ್ನು ಅನಾವಶ್ಯಕವಾಗಿ ತಮ್ಮ ಜೀವನದಲ್ಲಿ ನುಡಿಯಲಿಲ್ಲ. ಅವರಿಗೆ ಪ್ರತಿಯೊಂದು ಧರ್ಮದ ಅಂಶಗಳು ತಿಳಿದಿತ್ತು. ಅಂತೆಯೇ ಪರಿಪೂರ್ಣ ಧರ್ಮಕೊಡಲು ಸಾಧ್ಯವಾಯಿತು.

ಕನ್ನಡ ಸಾಹಿತ್ಯ ದೇಹವಾದರೆ, ಅದರ ಆತ್ಮ "ವಚನ ಸಾಹಿತ್ಯ" ಎಂದರೆ ತಪ್ಪಾಗಲಿಕ್ಕಿಲ್ಲ. ಮೂಲ ಕಲ್ಪನೆಗೆ ಒಂದು ಹೊಸ ತಿರುವನ್ನು ಕೊಟ್ಟಿತು. ವಿಚಾರವಾದವನ್ನು ಎತ್ತಿ ಹಿಡಿದ ಬೌದ್ಧ, ಜೈನ ಧರ್ಮಗಳು ದೇವರು ಇದ್ದಾನೊ, ಇಲ್ಲವೊ ಎಂಬ ಗೋಜಿಗೆ ಹೋಗದೆ ತಟಸ್ಥವಾದವು. ದೈನಂದಿನ ಬದುಕಿನಲ್ಲಿ ಒಳ್ಳೆಯದನ್ನೆ ಮಾಡುವುದು ಮತ್ತು ಒಳ್ಳೆಯ ರೀತಿಯಿಂದ ನಡೆದುಕೊಳ್ಳುವುದು ಮಾನವ ಜೀವನದ ಗುರಿ ಎಂದು ಸಾರಿದವು. ಆದರೆ ಚಾರ್ವಾಕರು ದೇವರು ಧರ್ಮ ಎನ್ನುವುದೇನೂ ಇಲ್ಲ, ಪೂರ್ವ-ಪುನರ್ಜನ್ಮವೆಂಬುದು ಇಲ್ಲ. ಈ ಜನ್ಮದಲ್ಲಿ ನೀನು ಏನು ಮಾಡುತ್ತಿಯೊ ಮಾಡು, ಕುಡಿ, ತಿನ್ನು, ಸಾಲ ತಂದಾದರೂ ತುಪ್ಪ ತಿನ್ನು ಎಂಬ ನಾಸ್ತಿಕ ಮಾತುಗಳಿಂದ ಜನರನ್ನು ಲೌಕಿಕ ಆಸಕ್ತಿ ಕಡೆ ಹೆಚ್ಚು ಪ್ರಚೋದಿಸಿದವು. ಇನ್ನೂ ವೈಧಿಕ ಧರ್ಮದಲ್ಲಿ 'ನಡೆಯೊಂದು ತೀರ ನುಡಿಯೊಂದು ತೀರ' ಎನ್ನುವ ಹಾಗೆ ನುಡಿಯಲ್ಲಿ ದೇವರು ಒಬ್ಬನೆ ಅವನು ಸತ್ಯಂ, ಶಿವಂ, ಸುಂದರನಾಗಿದ್ದಾನೆ. ಸರ್ವರೂ ಅವನ ಮಕ್ಕಳು ಎಲ್ಲರೂ ಸಮಾನರು ಎಂದೆಲ್ಲಾ ಹೇಳಿ ಶೂದ್ರ ಅಸ್ಪೃಶ್ಯರನ್ನು, ಹೆಣ್ಣುಮಕ್ಕಳನ್ನು ದಿನನಿತ್ಯ ವರ್ಣ, ವರ್ಗ,

ಬಡವ ಬಲ್ಲಿದ ಹೆಣ್ಣು-ಗಂಡು ಎಂಬ ಭೇದವನ್ನು ಸೃಷ್ಟಿಸಿ, ಅಮಾನುಷ ರೀತಿಯಲ್ಲಿ ಅವರನ್ನು ಶೋಷಿಸುತ್ತಿದ್ದರು, ವಂಚಿಸುತ್ತಿದ್ದರು. ಅದಕ್ಕಾಗಿಯೇ ಗುರು ಬಸವಣ್ಣನವರು ತಮ್ಮದೊಂದು ವಚನದಲ್ಲಿ ಖಾರವಾಗಿಯೇ ಟೀಕಿಸಿದ್ದಾರೆ.

ಏನಯ್ಯಾ, ವಿಪ್ರರು ನುಡಿದಂತೆ ನಡೆಯರು; ಇದೆಂತಯ್ಯಾ?
ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ!
ಲಿಂಗದೇವಯ್ಯಾ ಹೊಲೆಯರ ಬಸುರಲ್ಲಿ
ವಿಪ್ರರು ಹುಟ್ಟಿ ಗೋಮಾಂಸವ ತಿಂಬರೆಂಬುದಕ್ಕೆ ಇದೇ ದೃಷ್ಟ.

ವಿಪ್ರರು (ವೈದಿಕರು) ನುಡಿದಂತೆ ನಡೆಯರು; ಇದೆಂತಯ್ಯಾ ಎನ್ನುವ ಗುರು ಬಸವಣ್ಣನವರ ಪ್ರಶ್ನೆಯಲ್ಲಿ ಆಶ್ಚರ್ಯ ಮತ್ತು ತಿರಸ್ಕಾರ ಭಾವನೆ ತಾಳಿದ್ದಾರೆ. ಅದೇ ರೀತಿಯಾಗಿ ಸಾಮಾನ್ಯ ಕಾಯಕದ ಮೇದಾರ ಕೇತಯ್ಯನವರ ಮತ್ತು ಗುರು ಬಸವಣ್ಣನವರ ಜೀವನ ಕುರಿತಾಗಿ ಹೇಳುವಾಗ ಜನಪದರು ವಿಪ್ರರ ನಡೆಯನ್ನು ವೇದದ ಹುಸಿಯನ್ನು ತೀವ್ರವಾಗಿ ಖಂಡಿಸಿದರು.

ಮೇದಾರ ಕೇತಯ್ಯ ವಾದ ಹೂಡದೆ ಕಂಡ
ನಾದವಿಲ್ಲೆಂದು ವೇದದೊಳು॥ ವಚನಗಳು
ಬೋಧಿಸಲು ಮಿಗಿಲು ಜನಪದಕೆ
ವೇದದೊಳಗಿನ ಹುಸಿಯ ಓದಿದನು ಬಸವಯ್ಯಾ
ಭೇದ ಭೇದವನೆ ಬಿಚ್ಚಿಟ್ಟ॥ ಜನಪದಕೆ
ತೇದುಂಡ ಜೀವಿ ಬಸವಣ್ಣ.

ಈ ಜನಪದರ ಮತ್ತು ಸಮಕಾಲೀನ ಶರಣರ ವಚನಗಳನ್ನು ಗಮನಿಸಿದಾಗ ಗುರು ಬಸವಣ್ಣನವರ ವೈಚಾರಿಕ ಪ್ರಜ್ಞೆ ಹಾಗೂ ಅವರ ವೈಚಾರಿಕ ನಿಲುವು ಹೊಸ ರೂಪವನ್ನು ಪಡೆದುಕೊಂಡಿದೆ ಎನ್ನುವುದು ಸುಸ್ಪಷ್ಟ. ಅವರು ಹಳೆಯ ಶಾಶ್ವತ ಮೌಲ್ಯಗಳ ವಿಚಾರಗಳನ್ನು ನಿರಾಕರಿಸದೆ ಅವುಗಳಿಗೆ ಅಂಟಿದ ಕೊಳೆಯನ್ನು ಮಾತ್ರ ಕಿತ್ತೆಸೆದರು. (Shoud not throw the baby with the both water) ಅಂದರೆ ಸೋಪಿನ ಕೊಳೆನೀರಿನೊಡನೆ ಮಗುವನ್ನು ಎಸೆಯಬಾರದು. ಎಸೆಯ ಬೇಕಾದುದು ಅದರ ಕೊಳೆಯನ್ನು ಮಾತ್ರ. ಈ ಮೇಲಿನ ವಿಚಾರವಾದದ ಕೆಲವು ಧರ್ಮಗಳ ಸಾರವನ್ನು ಸಮಗ್ರವಾಗಿ ಆಧ್ಯಯನ ಮಾಡಿದ ಗುರುಬಸವಣ್ಣನವರು ಧರ್ಮವು ಎಲ್ಲರನ್ನು ಒಟ್ಟುಗೂಡಿಸುವ ವೈಚಾರಿಕ ಶಕ್ತಿಯಾಗುವುದಕ್ಕೆ ಬದಲಾಗಿ ಸಮಾಜವನ್ನು ಹರಿದು ಹಂಚುವ ಜಡವ್ಯವಸ್ಥೆಯಾಗಬಾರದೆಂದೂ, ಇದಕ್ಕಂಟಿದ ಅತಿಯಾದ ವಿಚಾರವಾದ ಮತ್ತು ಅತಿಯಾದ ಮೂಢನಂಬಿಕೆಯನ್ನು ಬುಡಸಮೇತ ಕಿತ್ತೆಸೆಯಬೇಕೆಂದು ಸಂಕಲ್ಪ ಮಾಡಿದಾಗ ಒಂದು ಹೊಸಧರ್ಮದ ರೂಪುರೇಷ ಅವರಿಗೆ ಗೋಚರವಾಯಿತು. ಆಗ ಅವರು ವಚನಗಳನ್ನು ಸಾಧನವಾಗಿ ಬಳಸಿಕೊಂಡರು. ಇವೇ ಮುಂದಿನ ಅವರ ಹೋರಾಟಕ್ಕೆ ಅಸ್ತ್ರವಾದವು. ಹೊಸ ಧರ್ಮವನ್ನು ಕಟ್ಟುವ ಸೂತ್ರವಾದವು, ಸಾಹಿತ್ಯವಾದವು, ಅದೇ ಧರ್ಮದ ಗ್ರಂಥಗಳಾದವು. ದೇವರ ಸ್ವರೂಪ, ದೇವರು

ಎಂದರೇನು? ಅವನ ಅಸ್ತಿತ್ವ, ಅಷ್ಟಾವರಣ, ಪಂಚಾಚಾರ, ಷಟಸ್ಥಲದ ಸಿದ್ಧಾಂತ ಮತ್ತು ಸಾಂಸಾರಿಕ ಜೀವನ ನಶ್ವರತೆ, ದಾಂಪತ್ಯ ಜೀವನದ ಸಾರ್ಥಕತೆ, ಇನ್ನಿತರ ಹಲವಾರು ವಿಷಯಗಳಲ್ಲಿ ಆಸ್ತಿಕವಾದದ ವೈಚಾರಿಕತೆ ವಿಚಾರಗಳನ್ನು ಕ್ರೋಢಿಕರಿಸಿ ಲಿಂಗಾಯತ ಧರ್ಮವನ್ನು ಕಟ್ಟಿ ಕೊಟ್ಟರು. ಅದನ್ನು ಜನಪದರು ಹೊಸಧರ್ಮದ ಹುಟ್ಟಿಗೆ ವಚನಗಳೇ ಕಾರಣವೆಂಬ ಸತ್ಯವನ್ನು ಹೊರಹಾಕಿದ್ದಾರೆ.

ವಚನ ಮಂಟಪ ಬಳ್ಳಿ ಶುಚಿ ಮೊಗ್ಗೆ ಹೂ ಬಿಡಲು
ರುಚಿಜೇನ ಹುಟ್ಟಿ ಹೊಸ ಮತವ । ಕಟ್ಟಿದರು
ವಚನ ಶಾಸ್ತ್ರಕರು ನಾಡೊಳಗೆ ॥

ಬಸವ ಸಾರಿದನಂದು ಕುಶಲದಲಿ ವಚನಗಳ
ಮುಸುಕಿರುಳು ಹರಿದು ನಸುಕಾತು॥ ಜಗದೊಳಗೆ
ಹೊಸಮತದ ಸೂರ್ಯನುದಿಸಿದನು.

ಎರಡು ಐತಿಹಾಸಿಕ ದಾಖಲೆಗಳನ್ನು ಇಲ್ಲಿ ಜನಪದರು ಹೇಳಿದ್ದಾರೆ.

1) ವಚನಗಳ ಹುಟ್ಟಿಗೆ ಮೊದಲು ಕಾರಣ ಗುರು ಬಸವಣ್ಣನವರು ಅಂದರೆ ಅವರೇ ಮೊದಲಿಗರು

2) ಜಾತಿಯತೆ ಎಂಬ ಕತ್ತಲನ್ನು ಸರಿಸಿ ಹೊಸ ಧರ್ಮವಾದ ಲಿಂಗಾಯತ ಧರ್ಮವೆಂಬ ಸೂರ್ಯನ ಬೆಳಕನ್ನು ನೀಡುವಲ್ಲಿ ಗುರು ಬಸವಣ್ಣನವರು ಒಂದು ಧರ್ಮವನ್ನು ಕೊಟ್ಟಿದ್ದಾರೆ ಎಂಬುದಕ್ಕೆ ಈ ಜನಪದರ ಸಾಲುಗಳೇ ಆಧಾರ. ಹೀಗೆ ಜನಪದರು ವೈಚಾರಿಕ ದೃಷ್ಟಿಕೋನವನ್ನಟ್ಟಕೊಂಡು ತಮ್ಮ ಹಂತಿಯ ಹಾಡುಗಳಲ್ಲಿ ಬಸವಾದಿ ಪ್ರಮಥರ ಜೀವನ ಸಾಧನೆಯನ್ನು ನಿರೂಪಿಸಿಕೊಟ್ಟಿದ್ದು ಕನ್ನಡ ಸಾಹಿತ್ಯಕ್ಕೆ ಬಹುದೊಡ್ಡ ಕೊಡುಗೆ ಎಂದೇ ಪರಿಗಣಿಸಬೇಕು. ಈ ಜನಪದ ಸಾಹಿತ್ಯದಿಂದ ಗುರು ಬಸವಣ್ಣನವರ ಜೀವನದ ಕೆಲವು ಘಟನೆಗಳಿಗೆ ಸಂಬಂಧಿಸಿದಂತೆ ಬಂದಿರುವ ಊಹಾಪೋಹಗಳಿಗೆ ಶಾಶ್ವತವಾಗಿ ಪರಿಹಾರವನ್ನು ಕಂಡು ಕೊಂಡಂತಾಗಿದೆ.

ಅರಿಯದೆ, ಜನನಿಯ ಜಠರದಲ್ಲಿ
ಬಾರದ ಭವಂಗಳಲ್ಲಿ ಬಂದೆ ತಂದೆ !
ಹುಟ್ಟಿತ್ತೆ ತಪ್ಪಾಯಿತ್ತೆ, ಎಲೆ ಲಿಂಗವೆ?
ಮುನ್ನ ಹುಟ್ಟಿದುದಕ್ಕೆ ಕೃಪೆ ಮಾಡು ಲಿಂಗವೆ !
ಇನ್ನು ಹುಟ್ಟಿದೆನಾದಡೆ
ಲಿಂಗದೇವಾ, ನಿಮ್ಮಾಣೆ ! ಬ.ವ.ದೀ 19

ಅರಿವು ಅರ್ಥಾತ್ ಜ್ಞಾನ ಇರದ ಕಾರಣ ಹಿಂದಿನ ಜನ್ಮವು ಈ ಜನ್ಮಕ್ಕೆ ಕಾರಣವಾಯಿತು. ಹೀಗಾಗಿ ತಾಯಿಯ ಗರ್ಭದಲ್ಲಿ ಜನಿಸಿದೆ. ಹುಟ್ಟಿದ್ದು ಮಹಾಪರಾಧವಾಯಿತೆ? ಎಷ್ಟು ರೀತಿಯ ಕೋಟಲೆಗಳನ್ನು ಕೊಡುತ್ತಿರುವೆ. ಈಗ ಹುಟ್ಟಿರುವುದನ್ನು ಮನ್ನಿಸಿ, ಅನುಗ್ರಹ ನೀಡು. ನಿನಗೆ ಮಾತು ಕೊಡುತ್ತೇನೆ. ಈಗ ಮರೆವು ಹರಿದು ಅರಿವು ಮೂಡಿದೆ. ಇನ್ನು ಹುಟ್ಟಿದೆನಾದರೆ ನೋಡು. ನಿನ್ನ ಅನುಗ್ರಹದಿಂದ ದೇವಾ ಇದೇ ಜನ್ಮದಲ್ಲಿ ಮುಕ್ತಿಯನ್ನು ಹೊಂದುತ್ತೇನೆ.

ಶೈವ ಮತ ತೊರೆದು ಲಿಂಗಾಯತ ಧರ್ಮ ಸ್ಥಾಪಿಸಿದ ಗುರು ಬಸವಣ್ಣನವರು

- ಸಚ್ಚಿದಾನಂದ ಚಟ್ನಳ್ಳಿ

ಗುರು ಬಸವಣ್ಣನವರು ಜನಿಸಿದ್ದು ಬಹುದೇವತೋಪಾಸನೆ ಪರಂಪರೆಯ ಹಿನ್ನಲೆಯುಳ್ಳ ಶೈವಬ್ರಾಹ್ಮಣರ ಮನೆಯಲ್ಲಿ. ಅವರ ಮನೆಯಲ್ಲಿ ಬಹುದೇವತೋಪಾಸನೆ ರೂಢಿಯಲ್ಲಿದ್ದರೂ ಸಿರಿಯಾಳ ಚಂಗಳೆ, ಓಹಿಲಯ್ಯ, ಕಾಳಿದಾಸ, ಕೊಳೂರು ಕೊಡಗೂಸು, ಧ್ರುವ, ಮಾರ್ಕಂಡೇಯ, ಕರಿಕಾಲ ಚೋಳ, ಚೋಳಿಯಕ್ಕ, ನಿಂಬಿಯಕ್ಕ, ನಂಬಿಯಣ್ಣ, ಮಾದಾರ ಚೆನ್ನಯ್ಯ, ದೇವರದಾಸಿಮಯ್ಯ, ಮುಂತಾದ ಶಿವಭಕ್ತರ ಕಥೆಗಳನ್ನು ಬಾಲ್ಯದಲ್ಲಿ ತಮ್ಮ ಅಜ್ಜ-ಅಜ್ಜಿ, ತಂದೆ ತಾಯಿ ಹಾಗು ಅಕ್ಕನವರಿಂದ ಕೇಳಿ/ಓದಿ ತಿಳಿದ ಗುರು ಬಸವಣ್ಣನವರ ಎಳೆಯ ಮನಸ್ಸಿಗೆ ಶಿವಭಕ್ತಿ ಮಾತ್ರ ಇಷ್ಟವಾಯಿತು. ಹೀಗಾಗಿ ಬಾಲಕ ಬಸವಣ್ಣನವರು ಬಾಲ್ಯದಲ್ಲಿ ಶಿವಭಕ್ತರಾದರು.

ಅಪಾರವಾದ ಶಿವಭಕ್ತಿಯನ್ನು ಮೈಗೂಡಿಸಿಕೊಂಡು ಶಿವನನ್ನೇ ದೇವರೆಂದು ನಂಬಿ ಆರಾಧಿಸುತ್ತ ಏಕ ದೇವತೋಪಾಸಕರಾದರು. ಗುರು ಬಸವಣ್ಣನವರ ಮನಸ್ಸಿನಲ್ಲಿ ಮುನ್ನಿನ ಶಿವಭಕ್ತರು ಆದರ್ಶ ವ್ಯಕ್ತಿಗಳಾಗಿ ನಿಲ್ಲುತ್ತಾರೆ. ಅವರ ಮನಸ್ಸಿನ ಮೇಲೆ ಶಿವಭಕ್ತಿಯು ಅಚ್ಚೊತ್ತಿದಂತಾಗುತ್ತದೆ. ಅವರು ಮನೆಯನ್ನು ತೊರೆದು ಕೂಡಲಸಂಗಮಕ್ಕೆ ಹೋದಾಗ ಅವರ ಶಿವಭಕ್ತಿ ಗರಿಗೆದರಿತು. ಇದಕ್ಕೆ ಕಾರಣ ಇತಿಹಾಸ ಹಾಗು ಪುರಾಣ ಪ್ರಸಿದ್ಧವಾದ ಕೂಡಲ ಸಂಗಮವು ಶಿವಭಕ್ತಿಯ ತವರೂರಿನಂತೆ ಕಂಗೊಳಿಸುತಿದ್ದುದು.

ಕೂಡಲ ಸಂಗಮದ ಗುರುಕುಲದ ಪೀಠಾಧಿಪತಿಗಳಾದ ಜಾತವೇದ ಮುನಿಗಳೂ ಶಿವಭಕ್ತರಾಗಿದ್ದರು. ವಿದ್ಯಾಭ್ಯಾಸಕ್ಕಾಗಿ ಜಾತವೇದ ಮುನಿಗಳ ಶಿಷ್ಯತ್ವ ಸ್ವೀಕರಿಸಿದ ಕೇವಲ 8-9 ವರ್ಷ ವಯಸ್ಸಿನ ಬಾಲಕ ಬಸವಣ್ಣನವರಿಗೆ ಸಹಜವಾಗಿಯೇ ತಮ್ಮ ವಿದ್ಯಾಗುರುವಿನ ಭಕ್ತಿ ಮತ್ತು ಆದರ್ಶಗಳು ಮೆಚ್ಚುಗೆಯಾದವು. ಕೂಡಲಸಂಗಮದಲ್ಲಿ ಸಂಗಮೇಶ್ವರನ ಅರ್ಚನೆಗೆ ಅವಕಾಶ ಸಿಕ್ಕಿದುದು ಅವರ ಶಿವಭಕ್ತಿ ಪರಾಕಾಷ್ಠತೆಯನ್ನು ತಲುಪುವಂತೆ ಮಾಡಿತು. ಇದನ್ನು ಅವರು ಬಾಲ್ಯದಲ್ಲಿ ಬರೆದ ಹಲವಾರು ವಚನಗಳಿಂದಲೂ ತಿಳಿದುಕೊಳ್ಳಬಹುದು.

ಶಿವಶಿವಾಯೆಂಬ ಮಂತ್ರವೆನಗೆ ಅಮೃತಾರೋಗಣೆಯೋ ಎನ್ನ ತಂದೆ.
ಹರ ಹರಾ ಎಂಬ ಮಂತ್ರವೆನಗೆ ಅಮೃತಾರೋಗಣೆಯೋ ಎನ್ನ ತಂದೆ.
ಶ್ರೀ ವಿಭೂತಿ ರುದ್ರಾಕ್ಷಿ ಭಕುತಿಯ ಮುಕುತಿಗೆ ಸಾಧನವೋ ಎನ್ನ ತಂದೆ,
ಎನಗಿದೆ ಗತಿಮತಿ ಚೈತನ್ಯ, ಕೂಡಲಸಂಗಮದೇವಯ್ಯಾ,
ನಿಮ್ಮ ನಾಮದ ರುಚಿ ತುಂಬಿತ್ತೊ ಎನ್ನ ತನುವ.

ಅಯ್ಯಾ ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ ಬಾರದಿರ್ದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ
ಪ್ರಥಮ ಭವಾಂತರದಲ್ಲಿ........................
....

ಇದು ಕಾರಣ ಕೂಡಲ ಸಂಗಮದೇವಾ

ನೀವು ಬರಿಸಿದ ಭವಾಂತರದಲ್ಲಿ ನಾನು ಬರುತಿರ್ದೆನಯ್ಯಾ.

ಈ ರೀತಿಯಾಗಿ ಬಾಲಕ ಬಸವಣ್ಣನವರು ಶಿವನ ಒಲುಮೆಗಾಗಿ ಹಂಬಲಿಸಿದ್ದಾರೆ. ಬಾಲ್ಯದಲ್ಲಿ ಗುರು ಬಸವಣ್ಣನವರು ಬರೆದ ಇಂತಹ ಹತ್ತಾರು ವಚನಗಳಿವೆ.

ಗುರು ಬಸವಣ್ಣನವರು ಕೂಡಲಸಂಗಮದಲ್ಲಿ ವಿದ್ಯಾರ್ಜನೆ ಮಾಡುತ್ತಾ ಕೂಡಲಸಂಗಮ ದೇವ(ಶಿವ)ನನ್ನು ಆರಾಧಿಸುತ್ತ ಕೂಡಲ ಸಂಗಮದೇವ ಎನ್ನುವ ವಚನಾಂಕಿತದೊಂದಿಗೆ ಬಾಲ್ಯದಲ್ಲಿಯೇ ವಚನಗಳನ್ನು ಬರೆಯುತ್ತಾ ಹಾಡುತ್ತ ಭಕ್ತಿ ಸಂಪನ್ನರಾದರು.

ಅವರು ಬೆಳೆದು ದೊಡ್ಡವರಾದಂತೆ ವೇದ ಶಾಸ್ತ್ರಗಳನ್ನು ಅಧ್ಯಯನ ಮಾಡುತ್ತ ವೇದಗಳಲ್ಲಿ ಇರುವ ಬ್ರಹ್ಮ - ಪರಬ್ರಹ್ಮ ಮತ್ತು ಆಗಮಗಳಲ್ಲಿ ಇರುವ ಶಿವ - ಪರಶಿವ ಶಬ್ದಗಳ ವ್ಯತ್ಯಾಸವನ್ನು ಗುರುತಿಸಿ ಇವುಗಳ ಬಗ್ಗೆ ಚಿಂತನೆ ನಡೆಸಿದರು. ಆಗ ಅವರ ಮನಸ್ಸಿಗೆ ಬ್ರಹ್ಮ ಬೇರೆ ಪರಬ್ರಹ್ಮ ಬೇರೆ, ಶಿವ ಬೇರೆ ಪರಶಿವ ಬೇರೆ, ಹರ ಬೇರೆ ಪರಮ ಬೇರೆ ಎನ್ನುವ ವಿಚಾರ ಸ್ಪಷ್ಟವಾಗತೊಡಗಿತು. ದೇವರು ನಿರಾಕಾರನೂ ನಿರ್ಗುಣನೂ, ಹುಟ್ಟುಸಾವುಗಳಿಗೆ ಅತೀತನಾದವನು ಎನ್ನುವ ತತ್ವ ತಮ್ಮ ಮನಸ್ಸಿನಲ್ಲಿ ಸ್ಪಷ್ಟವಾಗುತ್ತಲೇ, ಕೂಡಲ ಸಂಗಮದೇವ(ಶಿವ/ಹರ)ರು ಒಂದಾನೊಂದು ಕಾಲದಲ್ಲಿ ಹುಟ್ಟಿ ಈ ಇಳೆಯಲ್ಲಿ ಬದುಕಿ ಮತ್ತೊಂದು ದಿನ ಲಿಂಗೈಕ್ಯರಾದವರು. ಹೀಗಾಗಿ ಕೂಡಲಸಂಗಮದೇವರು ದೇವರಲ್ಲ ಅವರು ಒಬ್ಬ ಮಹಾತ್ಮ, ಯೋಗಿ, ತ್ಯಾಗಿ ಹಾಗು ಭಾರತದೇಶದ ಭಕ್ತಿಪರಂಪರೆಯ ಶಿವ ಪೀಠದ ಗುರು ಎಂದು ಗುರುತಿಸಿದರು. ಜೊತೆಗೆ ಇದುವರೆಗೆ ಪೂಜಿಸುತ್ತಿದ್ದ ಕೂಡಲ ಸಂಗಮದೇವ ಸ್ಥಾವರ ಲಿಂಗವು ಅದು ಶಿವನ ಕುರುಹು, ಶಿವನ ಸಂಕೇತ ಶಿವನ ಪ್ರತಿರೂಪ ಎನ್ನುವುದು ಅವರಿಗೆ ಸ್ಪಷ್ಟವಾಯಿತು. ಗುರು ಬಸವಣ್ಣನವರು ಪ್ರೌಢಮತಿಗಳಾಗುತ್ತ ಹೋದಂತೆ ಅವರ ಹೃದಯದಲ್ಲಿ ದೇವರ ಬಗ್ಗೆ ನಿಜವಾದ ಕಲ್ಪನೆಯೊಂದು ಮೂಡಲಾರಂಭಿಸುತ್ತದೆ. ನಿರಾಕಾರನಾದ ದೇವ(ಪರಮಾತ್ಮ)ನನ್ನು ಕುರಿತು ಧ್ಯಾನಿಸಲು ಆರಂಭಿಸಿದಾಗಲೇಅದೊಂದು ದಿನ (14.01.1155)ರಂದು ಗುರು ಬಸವಣ್ಣನವರಿಗೆ ಪರಮಾತ್ಮನ ಸಾಕ್ಷಾತ್ಕಾರವಾಯಿತು, ಸೃಷ್ಟಿಕರ್ತ ಪರಮಾತ್ಮನ ದಿವ್ಯ ದರ್ಶನ ಮತ್ತು ಅನುಗ್ರಹವಾಯಿತು.

ಅಂದಿನಿಂದ ಜಗದಗಲ ಮುಗಿಲಗಲ ಮಿಗೆಯಗಲವಾದ, ಪಾತಾಳ ಮತ್ತು ಬ್ರಹ್ಮಾಂಡಗಳಿಗೂ ಮೀರಿ ನಿಂದ, ಅಗಮ್ಯ ಅಗೋಚರ ಅಪ್ರತಿಮನಾದ ಸೃಷ್ಟಿಕರ್ತ ಪರಮಾತ್ಮನೇ ಬೇರೆ, ಯೋಗಿರಾಜನಾಗಿ ಕೈಲಾಸವಾಸಿಯಾಗಿದ್ದ ಶಿವನೇ ಬೇರೆ ಎಂದು ಅರಿತರು.

ವೇದಗಳಲ್ಲಿ ಪರಬ್ರಹ್ಮ ಮತ್ತು ಆಗಮಗಳಲ್ಲಿ ಪರಶಿವನೆಂದು ಕರೆಯಲ್ಪಟ್ಟ ನಿರಾಕಾರವಾದ ದೇವನನ್ನು ವಚನ ಸಾಹಿತ್ಯದಲ್ಲಿ 'ಲಿಂಗದೇವಾ' ಎಂದು ಕರೆದರು. ನಿರಾಕಾರವಾದ ದೇವನನ್ನು ಸೂಕ್ತವಾದ ಸಾಕಾರ ರೂಪದಲ್ಲಿ ಪೂಜಿಸಬೇಕು ಎಂದು ಯೋಚಿಸುತ್ತಿರುವಾಗಲೇ 'ಇಷ್ಟಲಿಂಗ'ದ ಪರಿಕಲ್ಪನೆ ಅವರ ಅಂತರಂಗದಲ್ಲಿ ಮೂಡಿ ಇಷ್ಟಲಿಂಗವನ್ನು ರೂಪಿಸಿ(ಕಂಡುಹಿಡಿದು) ಅದರಲ್ಲಿ ಪರಮಾತ್ಮನ ಅನುಗ್ರಹವನ್ನು ಅವತೀರ್ಣ ಮಾಡಿಕೊಂಡು ಆ ಇಷ್ಟಲಿಂಗವನ್ನು ಸ್ವತಃ ತಾವೇ ಧರಿಸಿಕೊಂಡು ಜಗತ್ತಿನ ಮೊಟ್ಟಮೊದಲ ಲಿಂಗಾಯತರಾದರು ಮಾತ್ರವಲ್ಲ ಲಿಂಗಾಯತ ಧರ್ಮದ ಸಂಸ್ಥಾಪಕರಾದರು.

ಗುರು ಬಸವಣ್ಣನವರಿಗೆ ಪರಮಾತ್ಮನ ಸಾಕ್ಷಾತ್ಕಾರವಾಗಿರುವುದನ್ನು ಹರಿಹರ ತಮ್ಮ ಬಸವರಾಜದೇವರ ರಗಳೆಯಲ್ಲಿ ಮತ್ತು ಸಿಂಗಿರಾಜ ತಮ್ಮ ಬಸವಪುರಾಣದಲ್ಲಿ ಉಲ್ಲೇಖಿಸಿದ್ದಾರೆ. ಇದು ಅವರ ಜೀವನದ ಮಹತ್ವಪೂರ್ಣವಾದ ಘಟನೆ. ಇದು ಅವರು ಶಿವಭಕ್ತಿಯಿಂದ ಲಿಂಗದೇವನ ಭಕ್ತಿಗೆ ಪರಿವರ್ತನೆಯಾದ ಘಟನೆ. ಗುರು ಬಸವಣ್ಣನವರು ಶೈವ ಮತ ತೊರೆದು ಲಿಂಗಾಯತ ಧರ್ಮ ಸಂಸ್ಥಾಪನೆ ಮಾಡಿದ ಐತಿಹಾಸಿಕ ಘಟನೆ.ಇಂತಹ ಒಂದು ಮಹತ್ವಪೂರ್ಣ ಪರಿವರ್ತನೆಯ ಘಳಿಗೆಯಲ್ಲಿ ಬರೆದಿರುವ ವಚನವಿದು:

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ,
ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ,
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ,
ಅಗಮ್ಯ, ಅಗೋಚರ ಅಪ್ರತಿಮ ಲಿಂಗವೆ, ಲಿಂಗದೇವಯ್ಯಾ,
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ.

ಈ ಒಂದು ಅತ್ಯಂತ ಮಹತ್ವಪೂರ್ಣವಾದ, ಲಿಂಗಾಯತ ಧರ್ಮದಲ್ಲಿ ಮೈಲಿಗಲ್ಲಾಗಿ ನಿಲ್ಲುವ ಈ ಘಟನೆಯನ್ನು ಗುರುತಿಸಿದವರು ಪೂಜ್ಯ ಶ್ರೀ ಮಹಾಜಗದ್ಗುರು ಡಾ॥ ಮಾತೆ ಮಹಾದೇವಿಯವರು.

ಈ ಘಟ್ಟವನ್ನು ಗುರುತಿಸದವರು/ಅರ್ಥಮಾಡಿಕೊಳ್ಳದವರು ಯಾರೇ ಆಗಲಿ ಧರ್ಮಗುರು ಬಸವಣ್ಣನವರ ಅಂತರಾಳವಾಗಲೀ ಲಿಂಗಾಯತ ಧರ್ಮ ಸ್ವತಂತ್ರ ಧರ್ಮವೆಂದಾಗಲೀ ಅರ್ಥ ಮಾಡಿಕೊಳ್ಳಲು ಸಾಧ್ಯವೇ ಇಲ್ಲ.

ಬಾಲ್ಯದಲ್ಲಿ ಗುರು ಬಸವಣ್ಣನವರು ಶಿವಾಲಯವನ್ನು ಅರಸಿಕೊಂಡು ಬಂದು ಸ್ಥಾವರಾತ್ಮಕವಾದ ಕೂಡಲ ಸಂಗಮೇಶ್ವರ ಲಿಂಗವನ್ನು ಅರ್ಚಿಸುತ್ತಿದ್ದರು. ಈ ಘಟನೆಯ ನಂತರ ಅವರು ಶಿವಾಲಯಗಳನ್ನು, ಸ್ಥಾವರಲಿಂಗಗಳನ್ನು ನಿರಾಕರಿಸುತ್ತಾರೆ. ಇಷ್ಟಲಿಂಗವನ್ನು ಧರಿಸಿ ದೇಹವನ್ನೇ ದೇಗುಲವನ್ನಾಗಿ ಮಾಡಿಕೊಳ್ಳುವ ಬಗೆಯನ್ನು ಕಲಿಸುವುದರ ಜೊತೆಗೆ ಇಂತಹ ಸದವಕಾಶವನ್ನು ಎಲ್ಲರಿಗೂ ಕೊಡುತ್ತಾರೆ.

ಉಳ್ಳವರು ಶಿವಾಲಯವ ಮಾಡುವರು;ನಾನೇನ ಮಾಡುವೆ ಬಡವನಯ್ಯಾ?
ಎನ್ನ ಕಾಲೇ ಕಂಭ, ದೇಹವೇ ದೇಗುಲ,ಶಿರವೆ ಹೊನ್ನ ಕಲಶವಯ್ಯಾ.
ಲಿಂಗದೇವಾ ಕೇಳಯ್ಯಾ ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ!

ಎಂದು ಇಲ್ಲದವರ ಧ್ವನಿಯಾಗಿ ನಿಲ್ಲುತ್ತಾರೆ.

ಧರ್ಮ ಗುರು ಬಸವಣ್ಣನವರ ಬಾಲ್ಯದ ಮತ್ತು ಧರ್ಮಗುರುವಾದ ನಂತರದ ವಿಚಾರ ಭಿನ್ನಾಭಿಪ್ರಾಯಗಳು:

ಶಿವಭಕ್ತರಾದ ಬಾಲಕ ಬಸವಣ್ಣನವರು ಆಚರಿಸಿದ ಭಕ್ತಿ, ಅನುಸರಿಸಿದ ಮತ ಅರ್ಥಮಾಡಿಕೊಂಡ ದೇವರ ಸ್ವರೂಪವೇ ಬೇರೆ ಧರ್ಮಗುರು ಬಸವಣ್ಣನವರು ಅರಿತು ಆಚರಿಸಿ ಬೋಧಿಸಿದ ಭಕ್ತಿಯ ಪರಿ ಮತ್ತು ದೇವರ ಸ್ವರೂಪವೇ ಬೇರೆ.

ಎನ್ನ ಮನದಲ್ಲಿ ಮತ್ತೊಂದನರಿಯೆನಯ್ಯಾ
'ಓಂ ನಮಃ ಶಿವಾಯ', 'ಓಂ ನಮಃ ಶಿವಾಯ' ಎನುತಿದ್ದೇನೆ
ಎನಗಿದೇ ಮಂತ್ರ, ಎನಗಿದೇ ಜಪ.

ಕೂಡಲ ಸಂಗಮದೇವಾ, ನೀನೆ ಬಲ್ಲೆ ಎಲೆ ಲಿಂಗವೆ.

ಶಿವಲೋಕಕ್ಕೆ ಸರಿ ಬೇರೆ ಲೋಕವಿಲ್ಲ,
ಶಿವಮಂತ್ರಕ್ಕೆ ಸರಿ ಬೇರೆ ಮಂತ್ರವಿಲ್ಲ.
ಜಗಕ್ಕೆ ಇಕ್ಕಿದೆ ಮುಂಡಿಗೆಯನೆತ್ತಿಕೊಳ್ಳಿ;
ಕೂಡಲಸಂಗಯ್ಯನೊಬ್ಬನೆ ದೈವವೆಂದು.

ಹೀಗೆ ಬಾಲಕ ಬಸವಣ್ಣನವರು ಶಿವಲೋಕ, ಶಿವಮಂತ್ರ, ಶಿವನೇ ಎಲ್ಲರಿಗೂ ದೇವನು ಎಂದು ಹೇಳಿದರೆ ಧರ್ಮಗುರು ಬಸವಣ್ಣನವರು ಹೇಳುವ ರೀತಿ ಹೀಗಿದೆ:

ಅಮೂಲ್ಯನು ಅಪ್ರಮಾಣನು ಅಗೋಚರ ಲಿಂಗವು
ಆದಿ ಮಧ್ಯಾಂತವಿಲ್ಲದ ಲಿಂಗವು ಸ್ವತಂತ್ರ ಲಿಂಗವು
ನಿತ್ಯ ನಿರ್ಮಳ ಲಿಂಗವು, ಅಯೋನಿ ಸಂಭವನಯ್ಯಾ
ನಮ್ಮ ಲಿಂಗದೇವರು.

ಸ್ವಾಮಿ ನೀನು, ಶಾಶ್ವತ ನೀನು
ಎತ್ತಿದೆ ಬಿರಿದ ಜಗವೆಲ್ಲ ಅರಿಯಲು
ಮಹಾದೇವ, ಮಹಾದೇವ!!
ಇಲ್ಲಿಂದ ಮುಂದೆ ಶಬ್ದವಿಲ್ಲ
ಪಶುಪತಿ ಜಗಕ್ಕೆ ಏಕೋದೇವ
ಸ್ವರ್ಗ ಮರ್ತ್ಯ ಪಾತಾಳದೊಳಗೆ
ಒಬ್ಬನೇ ದೇವ ಲಿಂಗದೇವ.

ಗುರು ಬಸವಣ್ಣನವರಿಗೆ ಲಿಂಗದೇವನ ಸಾಕ್ಷಾತ್ಕಾರವಾದ ನಂತರ ಅವರ ವಿಚಾರ ಮತ್ತು ಚಿಂತನಧಾರೆಯಲ್ಲಿ ಅಗಾಧವಾದ ಬದಲಾವಣೆಯಾಯಿತು. ಗುರು ಬಸವಣ್ಣನವರ ವಚನಗಳನ್ನು ಸಮಗ್ರವಾಗಿ ಬೌದ್ಧಿಕ, ತಾರ್ಕಿಕ ಮತ್ತು ಆಧ್ಯಾತ್ಮಿಕ ನೆಲೆಗಟ್ಟಿನಲ್ಲಿ ಅಧ್ಯಯನ ಮಾಡಿದವರು ಯಾರೇ ಆಗಲಿ ಈ ಒಂದು ಮಹತ್ತರವಾದ ಬದಲಾವಣೆಯನ್ನು ಗುರುತಿಸಬಹುದು.

ಉದಾಹರಣೆಗಾಗಿ ಹೇಳುವುದಾದರೆ ಬಾಲ್ಯದಲ್ಲಿ ಅವರ ಮೇಲೆ ಪ್ರಭಾವ ಬೀರಿದ ಶಿವಭಕ್ತರನ್ನು ಗುರು ಬಸವಣ್ಣನವರು ತಮ್ಮ ಬಾಲ್ಯದಲ್ಲಿ ಬರೆದ ಹಲವಾರು ವಚನಗಳಲ್ಲಿ ಸ್ತುತಿಸಿದ್ದಾರೆ; ಕೊಂಡಾಡಿದ್ದಾರೆ. ಅಂತಹ ಕೆಲವು ವಚನಗಳು ಈ ಕೆಳಗಿವೆ:

ಭಕ್ತಿ ಎಂತಹದಯ್ಯಾ ದಾಸಯ್ಯ ಮಾಡಿದಂತಹದಯ್ಯಾ.
ಭಕ್ತಿ ಎಂತಹದಯ್ಯಾ ಸಿರಿಯಾಳ ಮಾಡಿದಂತಹದಯ್ಯಾ.
ಭಕ್ತಿ ಎಂತಹದಯ್ಯಾ ನಮ್ಮ ಬಲ್ಲಾಳ ಮಾಡಿದಂತಹದಯ್ಯಾ.
ಭಕ್ತಿ ಎಂತಹದಯ್ಯಾ ಕೂಡಲಸಂಗಮದೇವಾ, ನೀ ಬಾಣನ
ಬಾಗಿಲ ಕಾಯ್ದಂತಹದಯ್ಯಾ.

ನೆರೆ ನಂಬೋ ನೆರೆ ನಂಬೋ ಧರಧುರವಿಲ್ಲದೆ ಸಾಮವೇದಿಗಳಂತೆ,
ನೆರೆ ನಂಬೋ ನೆರೆ ನಂಬೋ ದಾಸ-ದುಗ್ಗಳೆಯಂತೆ,

ನೆರೆ ನಂಬೋ ನೆರೆ ನಂಬೋ ಸಿರಿಯಾಳ-ಚಂಗಳೆಯಂತೆ,
ನೆರೆ ನಂಬೋ ನೆರೆ ನಂಬೋ ಸಿಂಧು-ಬಲ್ಲಾಳನಂತೆ,
ನೆರೆ ನಂಬಿದೆಯಾದಡೆ ತನ್ನನೀವ ಕೂಡಲಸಂಗಮದೇವಾ.

ಈ ಮೇಲಿನ ವಚನಗಳು ಗುರು ಬಸವಣ್ಣನವರು ಬಾಲ್ಯದಲ್ಲಿ ಬರೆದಂತಹವುಗಳಾಗಿವೆ. ಈ ವಚನಗಳಲ್ಲಿ ಅವರು ಸಿರಿಯಾಳ-ಚಂಗಳೆ, ದಾಸ-ದುಗ್ಗಳೆ, ಸಿಂಧು-ಬಲ್ಲಾಳ (ಸಿಂಧು=ಬಲ್ಲಾಳನ ಹೆಂಡತಿ) ಇವರ ವ್ಯಕ್ತಿತ್ವ ಮತ್ತು ಭಕ್ತಿಯನ್ನು ಮೆಚ್ಚಿಕೊಂಡು ಹೊಗಳುತ್ತಿದ್ದಾರೆ ಎಂದು ಅತ್ಯಂತ ಸರಳವಾಗಿ ಅರ್ಥ ಮಾಡಿಕೊಳ್ಳಬಹುದು.

ಅಷ್ಟೇ ಅಲ್ಲ ಅವರು ಈ ಮುನ್ನಿನ ಶಿವಭಕ್ತರೊಂದಿಗೆ ತಮ್ಮನ್ನು ತಾವು ಸಮನ್ವಯಗೊಳಿಸಿಕೊಳ್ಳುತ್ತಾರೆ. ಮುನ್ನಿನ ಶಿವಭಕ್ತರಾದ ನಿಂಬವ್ವೆಯನ್ನು ತಾಯಿ, ಚೆನ್ನಯ್ಯನವರನ್ನು ಅಯ್ಯ, ಕಂಚಿಯ ಚಂಗಳೆಯವರನ್ನು ಅಕ್ಕ ಎಂದು ಗೌರವಿಸಿ ಅವರ ಪರಂಪರೆಯವನು ತಾನೆಂದು ಅವರನ್ನು ತಮ್ಮ ಪೂರ್ವಜರು ಎಂದು ಕೊಂಡಾಡುತ್ತಾರೆ.

ಪ್ರೌಢರಾಗಿ ವೈಚಾರಿಕವಾಗಿ ಬೆಳೆದು, ಲಿಂಗಾಯತ ಧರ್ಮವನ್ನು ಸಂಸ್ಥಾಪಿಸಿದ ಧರ್ಮಪಿತ ಗುರುಬಸವಣ್ಣನವರ ಈ ಕೆಳಗಿನ ವಚನಗಳನ್ನು ಗಮನಿಸಿ:

ಪರುಷದ ಹೊರೆಯಲ್ಲಿ ಕಬ್ಬುನವಿದ್ದು ಹೊನ್ನಾಯಿತ್ತು, ನೋಡಿರೆ !
ಅವ್ವಾ ಚಂಗಳೆ, ನೀನಿದ್ದೇಳು ಕೇರಿಯವರು
ಲಿಂಗದ ನೋಂಪಿಯ ನೋಂತರೆ, ಹೇಳಾ?
ಕೂಡಲಸಂಗಮದೇವಂಗೆ ಚೀಲಾಳನೆಂಬ
ಬಾಯಿನವನಿಕ್ಕಿದರೆ ಹೇಳಾ?

ಅವ್ವಾ ಚಂಗಳೆ ನಿನ್ನ ಭಕ್ತಿಗಿಂತ ಪರುಷ-ಕಬ್ಬಿಣದ ಸಂಬಂಧ ಎಷ್ಟೋ ಲೇಸು. ಪರುಷದ ಸನ್ನಿಧಿಗೆ ಹೋದ ಕಬ್ಬಿಣ ಬಂಗಾರವಾಗುತ್ತದೆ. ಆದರೆ ನಿನ್ನ ಸನ್ನಿಧಿಗೆ ಬಂದ ನಿನ್ನ ಕೇರಿಯ ಭಕ್ತರು, ನೀನು ನಿನ್ನ ಮಗ ಚೀಲಾಳನನ್ನು ಕಡಿದು ಶಿವನಿಗೆ ಅಡುಗೆ ಮಾಡಿ ಕೊಟ್ಟಂತೆ ಅವರು ತಮ್ಮ ಮಗನನ್ನು ಕಡಿದು ಅಡುಗೆ ಮಾಡಿ ಕೊಡಲು ಸಾಧ್ಯವೇ.....? ಇಲ್ಲ. ಆದ್ದರಿಂದ ನಿನ್ನ ಭಕ್ತಿ ಆದರ್ಶವಲ್ಲ ಮತ್ತು ಅನುಕರಣೀಯವಲ್ಲ ಎಂದು ಧರ್ಮಗುರು ಬಸವಣ್ಣನವರು ಸಿರಿಯಾಳ ಚಂಗಳೆಯರ ಭಕ್ತಿಯನ್ನು ಅಲ್ಲಗಳೆಯುತ್ತಾರೆ.

ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣಾ,
ಬಲ್ಲಾಳನ ವಧುವಿನೊಡನೆ ಸರಸವನಾಡಿದಂದಿಂದ ಭಯ ಕಾಣಿರಣ್ಣಾ,
ಸಿರಿಯಾಳನ ಮಗನ ಬೇಡಿದಂದಿಂದ ಭಯ ಕಾಣಿರಣ್ಣಾ.
ದಾಸನ ವಸ್ತ್ರವ ಸೀಳಿದಂದಿಂದ ಭಯ ಕಾಣಿರಣ್ಣಾ.
ಅಘಟಿತಘಟಿತರು, ವಿಪರೀತಚರಿತ್ರರು
ಕೂಡಲಸಂಗನ ಶರಣರು ನಡೆದ ದಾರಿ ಭಯ ಕಾಣಿರಣ್ಣಾ.

ಮೇಲಿನ ವಚನದಲ್ಲಿ ದೇವರ ದಾಸಿಮಯ್ಯ, ಸಿರಿಯಾಳ, ಬಲ್ಲಾಳ ಇವರ ಭಕ್ತಿಯನ್ನು ವಿಡಂಬನೆ ಮಾಡುತ್ತಾರೆ ಮಾತ್ರವಲ್ಲ, ಅವರೆಲ್ಲರೂ ಮಾಡಿದ ಭಕ್ತಿ ಅನುಚಿತವಾದುದು ಮತ್ತು ಅಪಾಯ(**Danger**) ಕಾರಿಯಾದುದು ಎಂದು ಹೇಳುತ್ತಾರೆ.

ಶೈವ ಮತದ ಅನುಯಾಯಿಯಾಗಿದ್ದಬಾಲಕ ಬಸವಣ್ಣನವರಿಗೆ ಕಂಚಿ ಪುರವ ಕೈಲಾಸಕ್ಕೊಯ್ದುದು,

ಪೊನ್ನಮಳೆ ಕರೆಸಿದುದು ಆಶ್ಚರ್ಯವಾಗಿ ಅದು ಶ್ರೇಷ್ಠವೆನಿಸಿದುದು. ಧರ್ಮಗುರು ಬಸವಣ್ಣನವರ ದೃಷ್ಟಿಯಲ್ಲಿ ಅದು ಶ್ರೇಷ್ಠ ಭಕ್ತಿಯಲ್ಲ, ವ್ಯಾಪಾರ ಭಕ್ತಿ. ದಾಸ, ಚೋಳರು ಶಿವನಲ್ಲಿ ಬೇಡಿಕೊಂಡಂತೆ ಲಿಂಗದೇವಾ ನಾನು ನಿನ್ನಲ್ಲಿ ಬೇಡುವುದಿಲ್ಲ ಎನ್ನುತ್ತಾರೆ. ಭಕ್ತಿಯನ್ನು ಭಕ್ತಿಗಾಗಿ ಮಾಡಬೇಕು. ಪರಮಾತ್ಮನಿಗಾಗಿ ಮಾಡಬೇಕು ಮತ್ತು ದಿವ್ಯಾನಂದಕ್ಕಾಗಿ ಮಾಡಬೇಕು. ಇಂತಹ ಭಕ್ತಿ ಮಾಡುತ್ತ ಲಿಂಗದೇವಾ ನನಗೆ ನೀನೆ ಬೇಕು ಎಂದು ಕೇಳಬೇಕು. ಎನ್ನುವುದೇ ಲಿಂಗಾಯತ ಧರ್ಮ ಸಂಸ್ಥಾಪಿಸಿದ ಗುರು ಬಸವಣ್ಣನವರ ವಿಚಾರಧಾರೆಯಾಗಿದೆ. ಇದನ್ನು ಅವರು ಈ ಕೆಳಗಿನ ವಚನದಲ್ಲಿ ವ್ಯಕ್ತಪಡಿಸುತ್ತಿದ್ದಾರೆ.

ಎಲ್ಲವ ಬೇಡಿದರೆಮ್ಮವರು, ಒಂದ ಬೇಡ ಮರೆದರಯ್ಯಾ,
ಮರ್ತ್ಯಲೋಕದ ಗಣಂಗಳು ಒಂದ ಬೇಡ ಮರೆದರು.
ಕೂಡಲಸಂಗಮದೇವಾ, ನಿನ್ನ ಬೇಡ ಮರೆದರು.

ನೀನೆ ಬೇಕು ಎಂದು ಹಿಂದಿನ ಶಿವ ಭಕ್ತರಾರೂ ಕೇಳಲಿಲ್ಲ ಎನ್ನುತ್ತಾರೆ.

ಇನ್ನೂ ಕುತೂಹಲಕಾರಿಯಾದ ಸನ್ನಿವೇಶವನ್ನು ಹೇಳುತ್ತೇನೆ. ಬಾಲಕ ಬಸವಣ್ಣನವರು ಶಿವಭಕ್ತರಾಗಿದ್ದಾಗ ಬರೆದ ಈ ವಚನ ಗಮನಿಸಿ:

ದ್ವಿಜರಿಗೆ ಕೊಟ್ಟು ಹಲಬರು ಕೆಟ್ಟರು,ಉದ್ಧರಿಸುವನೊಬ್ಬ, ಶಿವಶರಣ ಸಾಲದೆ?
ನಾರಾಯಣ ವೃದ್ಧಬ್ರಾಹ್ಮಣನಾಗಿ ಬಂದು
ಬಲಿಯ ಭೂಮಿಯ ಬೇಡಿದ, ಕೊಟ್ಟ ಬಲಿ ಬಂಧನಕ್ಕೆ ಸಿಕ್ಕಿದ.
ಈಶ ಭಕ್ತನಾಗಿ ಬಂದು ದಾಸನ ವಸ್ತ್ರವ ಬೇಡಿದ,
ಕೊಟ್ಟ ದಾಸ ತವನಿಧಿಯ ಪಡೆದ.
ಕಪಟದಿಂದ ನಾರಾಯಣ ಹಾರುವನಾಗಿ ಬಂದು
ಕರ್ಣನ ಕವಚವ ಬೇಡಿದ, ಕೊಟ್ಟ ಕರ್ಣ ಕಳದಲ್ಲಿ ಮಡಿದ.
ಕಾಮಾರಿ ಜಂಗಮವಾಗಿ ಬಂದು ಸಿರಿಯಾಳನ ಮಗನ ಬೇಡಿದ,
ಕೊಟ್ಟ ಸಿರಿಯಾಳಸೆಟ್ಟಿ ಕಂಚಿಯಪುರ ಕೈಲಾಸಕ್ಕೊಯ್ದ.
ನಾರಾಯಣ ಹಾರುವನಾಗಿ ಬಂದು ನಾಗಾರ್ಜುನನ ಶಿರವ ಬೇಡಿದ,
ಕೊಟ್ಟ ನಾಗಾರ್ಜುನನ ಶಿರಹೋಯಿತ್ತು.
ಶಿವನು ಜಂಗಮವಾಗಿ ಬಂದು ಬಲ್ಲಾಳನ ವಧು(ಸಿಂಧು)ವ ಬೇಡಿದ,
ಕೊಟ್ಟ ಬಲ್ಲಾಳ ಸ್ವಯಲಿಂಗವಾದ.
ಇದು ಕಾರಣ ಇಲ್ಲಿಯೂ ಲೇಸು, ಅಲ್ಲಿಯೂ ಲೇಸು;
ಕೊಡಿರೇ, ನಮ್ಮ ಕೂಡಲಸಂಗನ ಶರಣರಿಗೆ.

ಈ ವಚನದಲ್ಲಿ ಕಪಟತನ ವಂಚನೆಯಿಂದ ದಾನ ಪಡೆದು ದಾನ ಕೊಟ್ಟವರನ್ನೇ ನಾಶ ಮಾಡಿದ ಹಾರುವರನ್ನು ಒಂದು ಕಡೆ ದೂಷಣೆ ಮಾಡುತ್ತಾರೆ. ಇನ್ನೊಂದು ಕಡೆ ಶಿವ/ ಶಿವಭಕ್ತರಿಗೆ ದಾನ ಕೊಟ್ಟು ಉದ್ಧಾರವಾದ ಶಿವಭಕ್ತರನ್ನು ಹೊಗಳುತ್ತಾರೆ ಮತ್ತು "ಕೊಡಿರೇ, ನಮ್ಮ ಕೂಡಲಸಂಗನ ಶರಣರಿಗೆ" ಎಂದು ಹೇಳುತ್ತಿದ್ದಾರೆ.

ಇಂತಹ ಅಪಾತ್ರವಾದ ಧರ್ಮಸಮ್ಮತವಲ್ಲದ, ಅತಿರೇಕದಿಂದ ಕೂಡಿದ ದಾನವನ್ನು ಕೇಳುವವರ ಬಗ್ಗೆ; ವೈಚಾರಿಕವಾಗಿ ಬೆಳೆದ ಧರ್ಮಗುರು ಬಸವಣ್ಣನವರ ವಿಚಾರ/ಅಭಿಪ್ರಾಯಗಳು ಬಾಲ್ಯದ ವಿಚಾರ/ಅಭಿಪ್ರಾಯಗಳು ಸಂಪೂರ್ಣವಾಗಿ ಭಿನ್ನವಾಗಿವೆ ಅವುಗಳನ್ನು ಈ ಕೆಳಗಿನ ವಚನದಲ್ಲಿ ಹೇಳುತ್ತಿದ್ದಾರೆ.

ಆನೆ, ಭಂಡಾರ, ಲಾಯದ ಕುದುರೆಯ ಬೇಡುವರಿಲ್ಲದೆ ಬಡವಾದೆನಯ್ಯಾ.
ಬೇಡುವುದೇನು ದೇವಾ ಮುನ್ನ ಬೇಡಿದೆ ಬಲ್ಲಾಳನ ವಧುವನು,
ಇನ್ನು ಬೇಡಿದಡೆ, ನಿಗಳವನಿಕ್ಕುವೆ.
ಬೇಡಿದ ಶರಣರಿಗೆ ನೀಡದಿರ್ದಡೆ ತಲೆದಂಡಕೂಡಲಸಂಗಮದೇವಾ.

ಎಲೆ ಶಿವನೆ(ಶಿವ ಪರಂಪರೆಯ ಜಂಗಮನೆ) ಬೇಡುವುದಾದರೆ ನನ್ನಲ್ಲಿರುವ ಆನೆ, ಧನ, ಕನಕ, ಲಾಯದ ಕುದುರೆ ಬೇಡು ಕೊಡುತ್ತೇನೆ.

"ಮುನ್ನಬೇಡಿದೆ ಬಲ್ಲಾಳನವಧುವನು, ಇನ್ನು ಬೇಡಿದಡೆ, ನಿಗಳವನಿಕ್ಕುವೆ." ಈ ಮುಂಚೆ ಬಲ್ಲಾಳನಲ್ಲಿ ಅವನು ವಧು ಸಿಂಧುಳನ್ನು ಬೇಡಿದಂತೆ ಬೇಡಿದರೆ ನಿನಗೆ ನಿಗಳವನಿಕ್ಕುವೆ (ಬೇಡಿ ಹಾಕಿ ಬಂಧನದಲ್ಲಿಡುವೆ) ಎನ್ನುತ್ತಾರೆ ಧರ್ಮಗುರು ಬಸವಣ್ಣನವರು.

ತ್ಯಾಗ ವಿರಾಗಗಳು ಜಂಗಮನ ಮೂಲ ಲಕ್ಷಣಗಳು. ಜಂಗಮನ ಬೇಡುವಿಕೆಯಲ್ಲಿ ಸಮಷ್ಟಿಯ ಹಿತದೃಷ್ಟಿವಿರಬೇಕೆ ಹೊರತು ವೈಯಕ್ತಿಕ ಹಿತ ಮತ್ತು ಭೋಗಕ್ಕಾಗಿ ಇರಬಾರದು. ವೈಯಕ್ತಿಕ ಭೋಗಕ್ಕಾಗಿ ಬೇಡುವುದು ಅಪರಾಧ ಅಂತಹವರನ್ನು ಶಿಕ್ಷೆಗೊಳಪಡಿಸಬೇಕು ಎನ್ನುತ್ತಾರೆ ಗುರು ಬಸವಣ್ಣನವರು. ಬೇಡಿದ ಶರಣರಿಗೆ ನೀಡದಿರ್ದಡೆ ತಲೆದಂಡ ಎಂದರೆ ದೇವರಿಗೆ/ವೈಚಾರಿಕ ಭಕ್ತಿಗೆ ಸಮ್ಮತವಾಗುವಂತಹದ್ದು ಏನು ಕೇಳಿದರೂ ಅದನ್ನು ಕೊಡುತ್ತೇನೆ ಆದರೆ ಧರ್ಮ ಸಮ್ಮತವಲ್ಲದುದನ್ನು /ಕೊಡಬಾರದುದನ್ನು ಕೇಳಿದರೆ ಬಂಧಿಸುತ್ತೇನೆ ಎನ್ನುತ್ತಾರೆ. ದಾಸಿಮಯ್ಯನ ಸನ್ನವೇಶದಲ್ಲಿ ಜಂಗಮನು ಅಷ್ಟೊಂದು ಬೆಲೆ ಬಾಳುವ ವಸ್ತ್ರವನ್ನು ಕೇಳಬಾರದು. ಏಕೆಂದರೆ ಧರ್ಮ ಗುರು ಬಸವಣ್ಣನವರ ಪ್ರಕಾರ ಸರಳತೆಯೇ ಜಂಗಮನಿಗೆ ಭೂಷಣ. ದಾಸಿಮಯ್ಯನು ಆ ಜಂಗಮನನ್ನು ಮನೆಗೆ ಕರೆದುಕೊಂಡು ಹೋಗಿ ಸರಳವಾದ ವಸ್ತ್ರಗಳನ್ನು ಕೊಡಬಹುದಿತ್ತು. ಸಿರಿಯಾಳ ಮತ್ತು ಬಲ್ಲಾಳದೇವರ ಸನ್ನಿವೇಶದಲ್ಲಿ ಅಂತಹ ದಾನವನ್ನು ಬೇಡಿದ ಜಂಗಮನಿಗೆ ಚೆನ್ನಾಗಿ ಬೈಯ್ದು ಇಲ್ಲವೆ ಶಿಕ್ಷೆಗೆ ಗುರಿಪಡಿಸಬೇಕಿತ್ತು. ಇದು ಧರ್ಮ ಗುರುವಾಗಿ ಗುರು ಬಸವಣ್ಣನವರು ಆಚರಿಸಿ ನಮ್ಮೆಲ್ಲರಿಗೂ ಅವರು ಆಜ್ಞಾಪಿಸಿದ/ಬೋಧಿಸಿದ ಪರಿ.

ಹೀಗೆ ಶೈವ ಮತದ ಶಿವಭಕ್ತಿಯು ವೈಚಾರಿಕ ಭಕ್ತಿಯಿಂದ ಬಹು ದೂರ ಸರಿದು ಆ ಭಕ್ತಿಯ ವ್ಯವಸ್ಥೆಯೇ ಶಿಥಿಲಗೊಂಡಿರುವಂತಹ ಸಂದರ್ಭದಲ್ಲಿ ಗುರು ಬಸವಣ್ಣನವರಿಗೆ ಹೊಸ ಭಕ್ತಿಯ ಮಾರ್ಗವನ್ನು ಹುಟ್ಟುಹಾಕುವುದು ಅನಿವಾರ್ಯವಾಗಿ ಅವರು ಗುರು-ಲಿಂಗ-ಜಂಗಮ ತತ್ವಗಳನ್ನೊಳಗೊಂಡ, ಷಟಸ್ಥಲ ದರ್ಶನವನ್ನೊಳಗೊಂಡ, ಪಂಚ ಆಚಾರಗಳಿಂದ ಕೂಡಿದ ಲಿಂಗದೇವನ ಭಕ್ತಿಯ ತಳಹದಿಯಿಂದ ರೂಪುಗೊಂಡ ಲಿಂಗಾಯತ ಧರ್ಮವನ್ನು ಸಂಸ್ಥಾಪಿಸಿದರು.

ಗುರು ಬಸವಣ್ಣನವರು ಶೈವ ಮತ ತೊರೆದು ಲಿಂಗಾಯತ ಧರ್ಮ ಸಂಸ್ಥಾಪಿಸಿದ ಪರಿವರ್ತನೆಯ ಘಟ್ಟವು (Transition Stage) ಅವರನ್ನು ಲಿಂಗಾಯ ಧರ್ಮದ ಧರ್ಮಗುರುವನ್ನಾಗಿ ಮಾಡುವುದರ ಜೊತೆಗೆ ಈ ಕೆಳಗಿನ ಸತ್ಯ ಸಂಗತಿಗಳನ್ನು ತಿಳಿಸಿಕೊಡುತ್ತದೆ.

1. ಬಾಲಕ ಬಸವಣ್ಣನವರು ಶೈವ ಮತದ ಅನುಯಾಯಿಯಾಗಿ ಶಿವನ ಆರಾಧಕರಾಗಿದ್ದರೂ ಧರ್ಮ ಗುರು ಬಸವಣ್ಣನವರು ಶೈವ ಮತೋಧ್ಧಾರಕರಲ್ಲ, ಶಿವನ ಆರಾಧಕರಲ್ಲ. ಅವರು ಲಿಂಗಾಯತ ಧರ್ಮ ಸಂಸ್ಥಾಪಕರು. ಲಿಂಗದೇವನ ಆರಾಧಕರು. ಹಾಗೆಂದು ಅವರು ಶಿವನನ್ನು ದ್ವೇಷ ಮಾಡುವವರಲ್ಲ. ಶಿವನು ಗುರು ಬಸವಣ್ಣನವರ ವೈಚಾರಿಕ ಭಕ್ತಿಗೆ ಮೂಲಿಗನು. ಏಕೆಂದರೆ ಮೂಲ ಶಿವ ಕೂಡ ಪರಮನ ಆರಾಧಕರಾಗಿದ್ದರು. ಮೂಲ ಶಿವ ಮಾಡಿದ ಭಕ್ತಿ ಕೂಡ ವೈಚಾರಿಕವಾಗಿತ್ತು. ನಂತರದಲ್ಲಿ ಪುರಾಣಗಳು ಅದನ್ನು ಕೆಡಿಸಿವೆ. ಹೀಗಾಗಿ ಗುರು ಬಸವಣ್ಣನವರ ಹೃದಯದಲ್ಲಿ ಶಿವನಿಗೆ ಗುರುವಿನ/ಮುತ್ತಜ್ಜನ ಸ್ಥಾನವಿದೆ. ("ಹರನುಮೂಲಿಗನಾಗಿ ಪುರಾತರೊಳಗಾಗಿ.."; "......ಎಮ್ಮ ಅಜ್ಜರ ಅಜ್ಜರು ಹಡೆದ ಭಕ್ತಿಯ ನಿಮ್ಮ ಕೈಯಲು ಕೊಂಬೆ, ಕೂಡಲ ಸಂಗಮದೇವಾ" ಎನ್ನುವ ಅವರ ನುಡಿಗಳಿಂದ ಸ್ಪಷ್ಟವಾಗುತ್ತದೆ.)

2. ಬಾಲಕ ಬಸವಣ್ಣನವರು ಮುನ್ನಿನ ಶೈವ/ವೀರಶೈವ ಪಂಥದ ಶಿವಭಕ್ತರ ಮೂಢ ಭಕ್ತಿಯನ್ನು ಶ್ರೇಷ್ಠ ಎಂದು ನಂಬಿದ್ದರೂ, ಧರ್ಮಗುರು ಬಸವಣ್ಣನವರು ಆ ಭಕ್ತಿಯನ್ನು ಅಲ್ಲಗಳೆದು ಲಿಂಗದೇವನಲ್ಲಿ ವೈಚಾರಿಕ ಭಕ್ತಿಯನ್ನು ಮಾಡಿದರು ಮತ್ತು ಅಂತಹ ಭಕ್ತಿಯನ್ನೇ ಮಾಡಬೇಕೆಂದು ತಮ್ಮ ಅನುಯಾಯಿಗಳಿಗೆ ಉಪದೇಶಿಸಿದ್ದಾರೆ ಮಾತ್ರವಲ್ಲ ಕಟ್ಟಪ್ಪಣೆ ಮಾಡಿದ್ದಾರೆ.

3. ಬಾಲಕ ಬಸವಣ್ಣನವರು ಶಿವ ಎನ್ನುವ ಪದವನ್ನು ಐತಿಹಾಸಿಕ ಪುರುಷನಿಗೆ ಸಂಬಂಧಿಸಿ ಹೇಳಿದರೆ ಧರ್ಮಗುರು ಬಸವಣ್ಣನವರು ಶಿವ ಎನ್ನುವ ಪದವನ್ನು ನಿರಾಕಾರ ನಿರ್ಗುಣನಾದ, ಅಗಮ್ಯ ಅಗೋಚರ ಅಪ್ರತಿಮನಾದ, ಸಾವಿಲ್ಲದ ಕೇಡಿಲ್ಲದ ಲಿಂಗದೇವನ ಕುರಿತಾಗಿ ಹೇಳಿದ್ದಾರೆ. ಕೆಲವು ವಚನಗಳಲ್ಲಿ ಶಿವ ಎನ್ನುವ ಪದವನ್ನು ಲಿಂಗದೇವಾ ಎನ್ನುವ ಪದಕ್ಕೆ ಸರಿಸಮವಾಗಿ ಬಳಸಿದ್ದಾರೆ.

4. ಗುರು ಬಸವಣ್ಣನವರ ವಚನಗಳಲ್ಲಿ ಕೂಡಲ ಸಂಗಮದೇವಾ ಎನ್ನುವ ಪದವು ಮೂರು ರೀತಿಯಲ್ಲಿ ಬಳಕೆಯಾಗಿದೆ. ಮೊದಲನೆಯದು ಯೋಗಿರಾಜನಾದ ಐತಿಹಾಸಿಕ ವ್ಯಕ್ತಿ ಶಿವನಿಗೆ ಸಂಬಂಧಿಸಿ ಬಳಕೆಯಾಗಿದೆ. ಎರಡನೆಯದಾಗಿ ಶಿವ ಪರಂಪರೆಯ ಜಂಗಮರ ಕುರಿತಾಗಿ ಬಳಕೆಯಾಗಿದೆ. ಮೂರನೆಯದಾಗಿ ನಿರಾಕಾರ ನಿರ್ಗುಣನಾದ ಪರಶಿವ/ ಪರಮಾತ್ಮ/ ಲಿಂಗದೇವನ ಕುರಿತಾಗಿ ಬಳಕೆಯಾಗಿದೆ.

5. ಲಿಂಗಾಯತ ಧರ್ಮದ ಚಳುವಳಿಯು ಶಿವಭಕ್ತಿಯಿಂದ ಆರಂಭವಾದರೂ ಅದು ಲಿಂಗದೇವನ ಭಕ್ತಿಯಲ್ಲಿ ಪರಿಪೂರ್ಣತೆಯನ್ನು ಸಾಧಿಸುತ್ತದೆ. ಲಿಂಗದೇವನ ಭಕ್ತಿಯಿಂದಾಗಿ ಅದು ಸ್ವತಂತ್ರ ಧರ್ಮದ ಅಸ್ತಿತ್ವವನ್ನು ಪಡೆದುಕೊಳ್ಳುತ್ತದೆ.

6.ಈ ಘಟನೆಯು ಅಕ್ಕಮಹಾದೇವಿಯವರಿಗೆ ಮತ್ತು ಸೊನ್ನಲಾಪುರದ ಸಿದ್ಧರಾಮೇಶ್ವರರಿಗೆ ಶೈವ ಮತದಿಂದ ಲಿಂಗಾಯದ ಧರ್ಮಕ್ಕೆ ಪರಿವರ್ತನೆ ಹೊಂದುವಂತೆ ಮಾಡಿ ತಮ್ಮ

ವಚನಾಂಕಿತವನ್ನು ಚೆನ್ನಮಲ್ಲಿಕಾರ್ಜುನದೇವರ ದೇವಾ, ಮತ್ತು ಕಪಿಲಸಿದ್ಧಮಲ್ಲಿಕಾರ್ಜುನದೇವರ ದೇವಾ ಎಂದು ಪರಿವರ್ತನೆ ಮಾಡಿಕೊಳ್ಳಲಿಕ್ಕೆ ಪ್ರೇರಣೆ ನೀಡಿದೆ.

7. ಇಷ್ಟಲಿಂಗವನ್ನು ಅಪ್ಪಿಕೊಂಡು, ಒಪ್ಪಿಕೊಂಡು, ಅದರ ಸ್ವರೂಪವನ್ನು ಅರ್ಥಮಾಡಿಕೊಂಡು ಇಷ್ಟಲಿಂಗವನ್ನು ಧರಿಸಿದವರಾಗಲಿ ಅಥವಾ ಅದನ್ನು ಪರಂಪರಾಗತವಾಗಿ ಧರಿಸಿಕೊಂಡವರಾಗಲಿ ಲಿಂಗಾಯತರೇ ಹೊರತು ವೀರಶೈವರಲ್ಲ ಎನ್ನುವುದನ್ನು ಸಾರಿ ಸಾರಿ ಹೇಳುತ್ತದೆ.

8. ಬಾಲಕ ಬಸವಣ್ಣನವರು ಬರೆದ ಎಲ್ಲಾ ವಚನಗಳು ಲಿಂಗಾಯತ ಧರ್ಮ ಸಿದ್ಧಾಂತಗಳಿಗೆ ಹೊಂದಿಕೆಯಾಗುವುದಿಲ್ಲ. ಏಕೆಂದರು ಅವರು ಬಾಲ್ಯದಲ್ಲಿ ಬರೆದ ವಚನಗಳನ್ನು ಧರ್ಮಗುರುವಾಗಿ ಬರೆದ ವಚನಗಳಿಂದ ಸ್ಥಾನ ಪಲ್ಲಟ (**Supersede**)ಮಾಡಿದ್ದಾರೆ.

ಈ ರೀತಿಯಲ್ಲಿ ಗುರು ಬಸವಣ್ಣನವರು ಶೈವ ಮತ ತೊರೆದು ಲಿಂಗಾಯತ ಧರ್ಮ ಸಂಸ್ಥಾಪನೆ ಮಾಡಿ ಶಿವ ಭಕ್ತಿಯಿಂದ ಲಿಂಗದೇವನ ಭಕ್ತಿಗೆ ಪರಿವರ್ತನೆ ಹೊಂದುತ್ತಾರೆ. ಹೀಗಾಗಿ ಗುರು ಬಸವಣ್ಣನವರು ಬಾಲ್ಯದಲ್ಲಿ ಬರೆದ ಕೆಲವೇ ಕೆಲವು ವಚನಗಳನ್ನು ಉದಾಹರಿಸಿ, ಅವರು ವೀರಶೈವ ಮತೋದ್ಧಾರಕರು; ಲಿಂಗಾಯತ ಧರ್ಮ ಸಂಸ್ಥಾಪಕರಲ್ಲ ಲಿಂಗಾಯತ ಮತ್ತು ವೀರಶೈವ ಎನ್ನುವ ಪದಗಳು ಸಮನಾರ್ಥಕ ಪದಗಳು ಎಂದು ಹೇಳುವುದು ಬಾಲಿಶವಾಗುತ್ತದೆ ಮಾತ್ರವಲ್ಲ ಅದು ಅಜ್ಞಾನ ಮತ್ತು ಅಹಂಕಾರಗಳ ಪರಮಾವಧಿ.

ಗುರುವಾಣಿ

ಬಡ ಪಶು ಪಂಕದಲ್ಲಿ ಬಿದ್ದಡೆ
ಕಾಲ ಬಡಿವುದಲ್ಲದೆ, ಬೇರೆ ಗತಿಯುಂಟೆ?
ಶಿವ ಶಿವಾ! ಹೋದಹೆ ಹೋದಹೆನಯ್ಯಾ
ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ
ಪಶುವಾನು, ಪಶುಪತಿ ನೀನು !
ತುಡುಗುಣಿಯೆಂದು ಎನ್ನ ಹಿಡಿದು ಬಡಿಯದ ಮುನ್ನ
ಒಡೆಯಾ, ನಿಮ್ಮ ಬಯ್ಯದಂತೆ ಮಾಡು ಲಿಂಗದೇವಾ. – ಬ.ವ.ದೀ.51

ಕೆಸರಿನಲ್ಲಿ ಬಿದ್ದು ನಿಸ್ಸಹಾಯಕವಾದ ಪಶು ಕಾಲನ್ನು ಬಡಿಯುತ್ತದೆ, ಈಜಲಿಕ್ಕೆ ಬರದೆ ಇರುವುದರಿಂದ ಬೇರೇನೂ ದಾರಿ ಇರದು. ಅದೇ ರೀತಿ ಶಿವನೇ ನಿನ್ನ ಧ್ಯಾನದ ಮೂಲಕ ಸಂಸಾರ ಸಾಗರವನ್ನು ಈಜೋಣ ಎಂದುಕೊಂಡರೆ ಇದು ಕೆಸರಿನಂತೆ ಮುಳುಗಿಸುತ್ತಿದೆ. ಪ್ರಯತ್ನ ಮಾಡಿದಷ್ಟೂ ಮತ್ತೆ ಕೆಳಗೇ ಇಳಿಯುವಂತಹ ಪರಿಸ್ಥಿತಿ. ಹೇಗಾದರೂ ಮಾಡಿ ನಿನ್ನ ಕಡೆಗೆ ನನ್ನನ್ನು ಎಳೆದುಕೊ. ಜೀವಾತ್ಮವೇ ಪಶು, ಭವ ಬಂಧನವೇ ಪಾಶ, ನೀನೇ ಪಶುಪತಿ. ನೀನು ನನ್ನನ್ನು ರಕ್ಷಿಸು. ಇಲ್ಲದಿದ್ದರೆ ನಿನಗೇ ಅಪವಾದ! ದನಗಳು ಬೇರೆಯವರ ಹೊಲಕ್ಕೆ ನುಗ್ಗಿ ಅವರ ಬೆಳೆಯನ್ನು ತಿಂದರೆ ಆಗ ಆ ದನಗಳನ್ನು ಚೆನ್ನಾಗಿ ಥಳಿಸುತ್ತಾರಲ್ಲದೆ ಕೊಂಡವಾಡೆಗೆ ಹಾಕುವರು. ಮಾಲಿಕನು ಹೋಗಿ ದಂಡಕೊಟ್ಟು ಆ ದನಗಳನ್ನು ಬಿಡಿಸಿಕೊಂಡು ಬರಬೇಕಾಗುತ್ತದೆ. ದನವು ಮಾಡಿದ ತಪ್ಪಿಗೆ ಮಾಲಿಕನಿಗೆ ಶಿಕ್ಷೆ, ಅದೇ ರೀತಿ ನಾನು ಮಾಡಿದ ತಪ್ಪಿಗೆ ನಿನ್ನನ್ನು ದೂಷಿಸುವರು. "ಈತ ದೇವ ಭಕ್ತನಂತೆ, ಮಾಡುವ ಕೆಲಸ ನೋಡು "ಎನ್ನಬಹುದು. ಆದ್ದರಿಂದ ನೀನು ನನ್ನನ್ನು ಒಳ್ಳೆಯತನದಲ್ಲಿ ಇಟ್ಟು ನೀನು ಬೈಸಿಕೊಳ್ಳದಂತೆ ಎಚ್ಚರಿಕೆ ವಹಿಸು.

ಬಸವಣ್ಣನವರ ಪರಿವರ್ತನಾತ್ಮಕ ಮನೋಧರ್ಮ

ಅಂದು ಇಂದು ಮುಂದು

– ಅಶ್ವಿನಿ ಮಹಾಜನಶೆಟ್ಟಿ, ವಿಜಯಪುರ

ವೇದಗಳು, ಉಪನಿಷತ್‌ಗಳು ಭಗವದ್ಗೀತೆ ವಿಶ್ವಕ್ಕೆ ನೀಡಿದ, "ಸರ್ವೇ ಜನಸುಖಿನೋ ಭವಂತು " ಎಂದು ಪ್ರಾರ್ಥಿಸುವ ಪರಿಪಾಠ ಬೆಳೆಸಿಕೊಟ್ಟಿರುವ, ದ್ವಾದಶ ಜ್ಯೋತಿರ್ಲಿಂಗಗಳ ಬೀಡಾಗಿರುವ, ಧ್ಯಾನ ಮತ್ತು ಯೋಗದ ಮಹತ್ವ ತಿಳಿಸಿಕೊಟ್ಟ, ಜಗದ ಜ್ಯೋತಿ ಬಸವಣ್ಣರಂತಹ ಹಲವಾರು ಮಹಾನ್ ಸಂತರು ಹುಟ್ಟಿ ಬೆಳೆದ ನಾಡು ಅಧ್ಯಾತ್ಮಕೇಂದ್ರ ಈ ದೇಶ.

ಇಂದಿನ ಪ್ರಸ್ತುತ ವಿದ್ಯಾಮನದಲ್ಲಿ, ತಾಂತ್ರಿಕ–ಯಾಂತ್ರಿಕ ಯುಗದಲ್ಲಿ, ಶಾಂತಿಗಾಗಿ ಹಪಹಪಿಸುತ್ತಿರುವ ದಿನಗಳಲ್ಲಿ ಜಗತ್ತಿಗೆ ಅಧ್ಯಾತ್ಮಿಕದ, ಭಕ್ತಿಯೋಗದ ತಿಳಿವಳಿಕೆ ಅವಶ್ಯಕತೆಯ ಅನಿವಾರ್ಯದ ಕಾಲಮಾನದಲ್ಲಿ.ವಿಶ್ವದ ಅನೇಕ ದೇಶಗಳು ಶಾಂತಿ, ಸಾಮರಸ್ಯ, ಸಹಬಾಳ್ವೆಗಾಗಿ ಹಸಿದ ಬಕಪಕ್ಷಿಯಂತೆ ಕಾಯುತ್ತಿರುವ ದಿನಗಳಲ್ಲಿ, ಘಳಿಗೆಯಲ್ಲಿ ನಾವೆಲ್ಲಾ ಜೀವಿಸುತ್ತಿದ್ದೇವೆ. ವಿಶ್ವದ ಯಾವ ದೇಶದಲ್ಲಿಯೂ ಅಧ್ಯಾತ್ಮಿಕತೆಯನ್ನು ತಮ್ಮ ಸಂಸ್ಕೃತಿಯ ಭಾಗವಾಗಿ ಕಾಣುವುದಿಲ್ಲ. ನಮ್ಮ ದೇಶ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಕಾಣುತ್ತದೆ. ಹಾಗಾಗಿಯೇ ಪರಕೀಯರಕ್ಕಿಂತ ಚಿಂತನೆಗಳಲ್ಲಿ , ವಿಚಾರಗಳಲ್ಲಿ,ಆಚರಣೆಗಳಲ್ಲಿ, ದೈನಂದಿನ ಮತ್ತು ದೇಶಿಯ ಆಗುಹೋಗುಗಳಲ್ಲಿ ಶಾಂತಿ, ಸಹನೆ,ಸತ್ಯ, ಅಹಿಂಸೆ ಉಳಿದುಕೊಂಡಿದೆ ಎಂದೆನ್ನಬಹುದು.

ವಿಶ್ವಗುರು ಬಸವಣ್ಣನವರು ನಡೆದಾಡಿದ ಕಾಲ 12 ನೇ ಶತಮಾನ, 12ನ್ನು ತಿರುವಾಗಿ ಬರೆದಾಗ 21. ಈ 21 ನೇ ಶತಮಾನದ ನಾವು ಆ ಗುರುವನ್ನು ಕಂಡವರಿಲ್ಲ, ಅವರ ವಾಣಿಯನ್ನ ಕೇಳಿದವರಿಲ್ಲ. ಆದರೆ 9 ಶತಮಾನ ಕಳೆದರೂ ನಮ್ಮೆಲ್ಲರ ಅಂತರಂಗದ ಅರಿವಿನ ಮಿಡಿತದಲ್ಲಿ, ನಮ್ಮ ಮನ ಸ್ಮೃತಿಪಟಲಗಳಲ್ಲಿ, ಹೃದಯಗಳಲ್ಲಿ ಆರಾಧ್ಯದೈವವಾಗಿ ನೆಲೆಯೂರಿದ್ದಾರೆಂಬುದಕ್ಕೆ ಕಾರಣ ಅವರು ತೋರಿಸಿಕೊಟ್ಟ ಭಕ್ತಿ ಮತ್ತು ಕರ್ಮದ ಮಾರ್ಗಗಳಿಂದ ಧಾರ್ಮಿಕ–ಸಾಮಾಜಿಕ–ರಾಜಕೀಯ ಅಸಮಾನತೆಯನ್ನು ತಮ್ಮ ಕ್ರಾಂತಿಕಾರಿ ಆಂದೋಲನದ ಪರಿವರ್ತನೆಯ ಪ್ರತಿಬಿಂಬದಿಂದ.

"ನೂರಾರು ಟೀಕೆಗಳಿಂದ ಮಾಡಲಾಗದ ಪರಿವರ್ತನೆಯನ್ನು ಒಂದೊಳ್ಳೆಯ ಹಿತವಾದ ಮಾತಿನಿಂದ ಸಾಧ್ಯವಿದೆ" ಎಂದು ವಿದೇಶಿ ಬರಹಗಾರರಾದ ವಿನ್ಸಂಟ ಪೀಲೆಯವರ ಹೇಳಿಕೆ ತುಂಬಾ ಪ್ರಸ್ತುತವಾಗಿದೆ. ಬಸವಣ್ಣನವರು ತಾವು "ನಡೆದು ನುಡಿದ ಮಾತುಗಳು"–ವಚನಗಳ ರೂಪದಲ್ಲಿ ಜನಸಾಮಾನ್ಯರನ್ನು ಆಲೋಚನೆ ಕಡೆಗೆ ತಿರುಗಿಸಿ ಸಮಾಜದಲ್ಲಿ ಬೇರು ಬಿಟ್ಟಿದ್ದ ಅಸ್ಪೃಶ್ಯತೆ, ಜಾತಿಯತೆ, ಪುರೋಹಿತಶಾಹಿ ಆಡಳಿತ, ದಲಿತರ ಮೇಲಿನ ದಬ್ಬಾಳಿಕೆ, ಕಂದಾಚಾರ, ಮೂಢ ಸಂಪ್ರದಾಯಗಳನ್ನು ಸಮಾಜದಿಂದ ಕಿತ್ತೊಗೆಯಲು ತಮ್ಮ ವಚನಗಳನ್ನೇ ಅಸ್ತ್ರ ಮಾಡಿಕೊಂಡು ಹಿತೋಪದೇಶಗಳಿಂದ, ತತ್ವಗಳಿಂದ, ಜನರಲ್ಲಿ ಚಿಂತನೆ ಮೂಡಿಸಿ ಪರಿವರ್ತನೆಯ ಗಾಳಿ ಬೀಸಿ ಬದಲಾವಣೆಗೆ ಶ್ರಮಿಸಿ ಸಮಾಜದಲ್ಲಿ ಸುಧಾರಣೆಗೆ ಬೆಳಕು ತಂದರು.

ದಯವಿಲ್ಲದ ಧರ್ಮವದೇವುದಯ್ಯಾ? ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ;
ದಯವೇ ಧರ್ಮದ ಮೂಲವಯ್ಯಾ! ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯ !

ಬಸವಣ್ಣನವರ ಈ ವಚನ ಇಂದಿನ ವರ್ತಮಾನಕಾಲಕ್ಕೆ ಬಹು ವಾಸ್ತವಿಕವೆನಿಸುವುದು. ' ದಯವಿಲ್ಲದ ಧರ್ಮವೇ ಇಲ್ಲ, ದಯವೇ ಧರ್ಮದ ಮೂಲ'–ಆದುದರಿಂದ ಸಕಲ ಜೀವರಾಶಿಗಳ ಬಗ್ಗೆ ಯಾರಲ್ಲಿ ದಯೆ, ಅನುಕಂಪ, ಕರುಣೆ ಇದೆಯೋ ಅವರನ್ನು ಮಾತ್ರ ದೇವರು ನೆಚ್ಚುತಾನೆ ಆದರೆ ಇಂದು ನಾವೆಲ್ಲಾ ದಯೆ ಅನ್ನೊಪದಕ್ಕೆ ಬೆಂಕಿ ಹಚ್ಚಿ ಸುಟ್ಟಿದಿವಿ. ಹಿಂದೂ, ಮುಸ್ಲಿಂ, ಕ್ರೈಸ್ತ, ಜೈನ, ಬೌದ್ದ,ಪಾರ್ಸಿ,ಸಿಖ್ ಹೀಗೆ ಧರ್ಮಗಳ ಹೆಸರಲ್ಲಿ ಮನುಷ್ಯ–ಮನುಷ್ಯನ ಕೊಂದು ಬದುಕುತ್ತಿದಿವಿ. ನರ ಭಕ್ಷಕರಾಗಿದ್ದಿವಿ. ನರ ಹತ್ಯಾಕಾಂಡ ಸಾಮಾನ್ಯವಾಗಿದೆ. ಇನ್ನು ಪ್ರಾಣಿ–ಪಕ್ಶಿಗಳ ಬಲಿ ಲೆಕ್ಕಕ್ಕಿಲ್ಲದ ಪ್ರಶ್ನೆ ಎಂದೆನಿಸುತ್ತದೆ.

ಧರ್ಮ, ಜಾತಿಗಳ ಹೆಸರಿನಲ್ಲಿ ಭಯೋತ್ಪಾದನೆ, ಉಗ್ರ ಚಟುವಟಿಕೆಗಳಲ್ಲಿ ತೊಡಗಿ, ಕೆಲವರ ಸ್ವಾರ್ಥಕ್ಕಾಗಿ ಇಡೀ ಮನುಕುಲವೇ ಬೆಚ್ಚಿ ಬೀಳುವಂತಾಗಿದೆ.ಅಣ್ಣ ಬಸವಣ್ಣರ ಮೇಲಿನ ವಚನ ಅರಿತು, ತಿಳಿದು, ಅಳವಡಿಸಿಕೊಂಡಿದ್ದರೆ "ಪ್ರಾಣ"ವನ್ನು ಕೈಯಲ್ಲಿ ಜೋಪಾನ ಮಾಡಿಕೊಂಡು ಹೆದರಿಕೆಯಲ್ಲಿ ಬದುಕುವ ದುಃಸ್ಥಿತಿ ಒದುಗುತ್ತಿರಲಿಲ್ಲವೇನೋ?!

ಭಾರತೀಯ ಪರಿಸರದಲ್ಲಿ "ಜಾತಿ" ಮಾನವನ ವ್ಯಕ್ತಿತ್ವದ ಮಾನದಂಡವಾಗಿದೆ. ಮೇಲು–ಕೀಳುಗಳೆಂಬ ಹಣೆಪಟ್ಟಿ ಕೊಟ್ಟು ನಮ್ಮ ನಮ್ಮಲ್ಲೇ ಬೇಧ–ಭಾವ ಎಣಿಸುತ್ತಿದ್ದಿವಿ. ಭಾವೈಕ್ಯತೆ ಮರೀಚಿಕೆಯಗಿದೆ. ಭಗವಂತ ಯಾವ ಜೀವಿಯನ್ನು ಜಾತಿ ಆಧಾರದ ಮೇಲೆ ಸೃಷ್ಟಿಸಿಲ್ಲ. ಇವೆಲ್ಲ ಮಾನವ ನಿರ್ಮಿತ ಸ್ವಾರ್ಥದ ಭಾವನೆಗಳೇ ಕಾರಣ. ಕೀಳು ಜಾತಿಯವನು ಮಾಡಿದ ವಸ್ತುಗಳು ಬಳಸಬಲ್ಲೆವು ಆದರೆ ಅವನೊಂದಿಗೆ ಸಂಬಂಧ ಬೆಳೆಸಲೊಲ್ಲೆವು. ಇದಕ್ಕೆಲ್ಲಾ ದೇವರ ನಾಮಕಿಂತದ ಬೆಂಬಲ ಬೇರೆ ನಮಗೆ!.

ಅಂದು ಬಸವಣ್ಣನವರು ಅಂತರ್ಜಾತಿಯ ವಿವಾಹ ಮಾಡಿ ನಾವೆಲ್ಲ ಒಂದೇ ಎಂದು ಸಾರಿದರು. ಮಾದರ ಚೆನ್ನಯ್ಯ, ಹಡಪದ ಅಪ್ಪಣ್ಣ, ಡೋಹರ ಕಕ್ಕಯ್ಯ ಜೊತೆ ಕೂಡಿ ಒಡನಾಡಿ ಜೀವಿಸಿದ ಬಸವಣ್ಣಾ ಅವರನ್ನು ಕಲ್ಯಾಣದ ಹಾದಿಯಲ್ಲಿ ತಲೆಯತ್ತಿ ಓಡಾಡುವಂತೆ ಮಾಡಿ ಜಾತಿಯತೆಗೆ ಕೊನೆ ಹಾಡಲು ಪ್ರಯತ್ನಿಸಿದರು. ಆದರೆ ಇಂದಿಗೂ ಜಾತಿ ನಮ್ಮೆಲ್ಲರ ಜನ್ಮಸಿದ್ದ ಹಕ್ಕು ಎಂಬಂತೆ ವ್ಯವಹರಿಸುತಿದ್ದೆವೆ.

ಜೀವನಕ್ಕಿಂತ ಜಾತಿ ಮುಖ್ಯ ಎಂಬಂತೆ ಬೇರೆ ಜಾತಿಯವರೊಂದಿಗೆ ಮದುವೆಯಾಗುವುದು ಅನರ್ಹವಾದಂತಾಗಿದೆ. ಶಿಕ್ಷಣದಲ್ಲಿ ಜಾತಿ ಆಧಾರದ ಮೇಲೆ ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯಗಳಲ್ಲಿ ಸೀಟು ಹಂಚಿಕೆ. ಉದ್ಯೋಗಗಳಲ್ಲಿ ಪ್ರತಿಭೆಗೆ ದೊರೆಯಬೇಕಾದ ಪುರಸ್ಕಾರ, ಕೌಶಲ್ಯಕ್ಕೆ ಸಿಗಬೇಕಾದ ಮನ್ನಣೆ ಜಾತಿಯ ಮೇಲೆ ಅವಲಂಬನೆ. ಪ್ರಜಾಪ್ರಭುತ್ವ ಅಡಳಿತದ ಸರಕಾರದಲ್ಲಿ, ರಾಜಕೀಯ ರಂಗದ ಶಕ್ತಿ ಜಾತಿವಾದಿಗಳ ಮೂಲೆಗುಂಪಾಗಿದೆ. ಜನರ ಕಷ್ಟಗಳಿಗೆ ಸ್ಪಂದಿಸದ ಅಸಹನೆ.

ಹೀಗೆ ಜಾತಿಯೇ ಮನುಷ್ಯನನ್ನು ಗುರುತಿಸುವ ಪರಮೊಚ್ಚ ಸಂಕೇತವಾಗಿದೆ. ಅರಿವಿನ ಗುರು

ಹೇಳಿದಂತೆ ಪಾಲಿಸಿದರೆ ಧರ್ಮ,ವರ್ಣ, ಜಾತಿ ಮರೆತು ಒಂದಾಗಿ ಬಾಳಿದರೆ ಸ್ವಾಸ್ಥ್ಯಯ ಸಮಾಜ ಇಂದೇ ಕಾಣಬಹುದು. ಅಂದಿನ ಕಾಲಕ್ಕೆ ಹೋಲಿಸಿದರೆ ಇಂದು ನಾವೆಲ್ಲ ವಿದ್ಯಾವಂತರು,ಶಿಕ್ಷಿತರು, ಅಕ್ಷರಸ್ಥರು ಬಹಳ ಯೋಚಿಸಬೇಕಾದ ವಿಷಯ. ಹಾಗೂ ನಮ್ಮೊಂದಿಗೆ ಮಣ್ಣಾಗುವಂತೆ ಮಾಡುವ ಹೊಣೆ ನಮ್ಮ ಮೇಲಿದೆ ಕಾರಣ ಮುಂದಿನ ಪೀಳಿಗೆಗೆ ಜಾತಿ ಬಳುವಳಿಯಾಗಿ ಹೋಗಬಾರದು. ಇಲ್ಲಿಗೆ ಕೊನೆಗಾಣಲಿ.

ಬಸವಣ್ಣವರ ಕೂಗು "ಸರ್ವರಿಗೂ ಸಮಬಾಳು,ಸರ್ವರಿಗೂ ಸಮಪಾಲು" ಕೇಳುತ್ತಿರುತ್ತದೆ. ಇಂದು ಸ್ತ್ರೀ ಪುರುಷ ಸಮಾನ ಹಕ್ಕುಗಳನ್ನು ಪಡೆದು ಅಟೋ ಚಾಲಕಿಯಿಂದ ವಿಮಾನ ಹಾರಾಡಿಸುವ ಪೈಲಟ್, ಮನೆಯ ಅಂಗಳದಿಂದ ದೇಶದ ಗಡಿ ಭಾಗಗಳಲ್ಲಿ ಸೈನಿಕಳಾಗಿ ದೇಶ ಕಾಯುವ ರಕ್ಷಕಿ, ಬಿಡಿಗಾಸಿಗೂ ಪರರಿಗೆ ಕೈ ಒಡ್ಡುವದನ್ನು ಬಿಟ್ಟು ಸಾಲ ನೀಡಬಹುದಾಂತಹ ಆರ್ಥಿಕ ಸುಭದ್ರತೆ ಪಡೆದಿದಾಳೆ.ಕೂಲಿಕೆಲಸ ಮಾಡಿವುದರಿಂದ ಸಂಸ್ಥೆಗಳ ಅಧಿಕಾರಿಯಾಗಿದ್ದಾಳೆ. ಹೀಗೇ ಸಾಮಾಜಿಕವಾಗಿ, ಆರ್ಥಿಕವಾಗಿ, ಮಾನಸಿಕವಾಗಿ ಸಬಲೆಯಾಗಿದ್ದಾಳೆ. ಆದರೆ ಇಂದಿಗೂ ಭ್ರೂಣ ಹತ್ಯೆ, ವರದಕ್ಷಿಣೆ, ದೇವದಾಸಿ ಪದ್ದತಿ, ವೈಶ್ಯಾವಾಟಿಕೆ, ದ್ವಿಪತ್ನಿತ್ವ, ಪತಿಯ ಸಾವಿನ ನಂತರದ ಹಲವು ಕಂದಾಚರಗಳ ಆಚರಣೆ. ಕುಟುಂಬಗಳಲ್ಲಿನ ಶೋಷಣೆ, ಅನಕ್ಷರತೆ ಸಮಾಜದ ಪಿಡುಗುಳಾಗಿವೆ;

ಮಡಿವಂತಿಕೆಯ ನೆಪದಲ್ಲಿ ,ಹೆಣ್ಣುಮಕ್ಕಳನ್ನು ದೇವರ ದರ್ಶನಕ್ಕಾಗಿ ದೇವಾಲಯ ಪ್ರವೇಶ ನಿರ್ಬಂದಿಸಿದಾಗ; ಕೀಳುಜಾತಿಯವರು ಮನೆಗೆ ಬಂದಾಗ ತಿರಾಸ್ಕಾರ ಭಾವದಿಂದ ನೋಡಿದಾಗ;ಜಾತಿಯ ಹೆಸರಲ್ಲಿ, ಭಗವಂತನ ನೆಪವೊಡ್ಡಿ ತಂದೆ ತಾಯಿಗಳಲ್ಲಿ, ಬಂಧುಗಳಲ್ಲಿ, ಸ್ನೇಹಿತರಲ್ಲಿ, ರಕ್ತಗತವಾಗಿ ಉಳಿಸಿಕೊಂಡಿದ್ದ ಜಾತಿಯ ವಾಸನೆ ಕಂಡಾಗ;ಇವೆಲ್ಲವುಗಳನ್ನು ಹೋಗಲಾಡಿಸಲು ಬಸವಣ್ಣರ ಸಮಾನತೆಯ ತತ್ವಗಳ ಚರ್ಚೆ, ಗೋಷ್ಠಿ,ಸಭೆಗಳನ್ನು ಮಾಡಿ ಸರ್ವರಿಗೂ ಸರ್ವ ರೀತಿಯಲ್ಲಿ ಅರಿವು ಮೂಡಿಸಬೇಕಾಗಿದೆ.

ಕಳಬೇಡ, ಕೊಲಬೇಡ, ಹುಸಿಯನುಡಿಯಲುಬೇಡ;
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ;
ತನ್ನ ಬಣ್ಣಿಸಬೇಡ ಇದಿರ ಹಳಿಯಲುಬೇಡ;
ಇದೇ ಅಂತರಂಗ ಶುದ್ಧಿ,ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ.

ಕಳವು, ಹಿಂಸೆ, ಸುಳ್ಳು, ಸಿಟ್ಟು, ತನ್ನನ್ನು ತಾನೇ ಹೊಗಳಿಕೊಳ್ಳುವುದು,ಅನ್ಯರನ್ನು ನಿಂದಿಸುವುದು, ಇವು ದುರ್ಗಣಗಳು. ಇವುಗಳನ್ನು ನಾವು ಬಿಟ್ಟು ಬಿಡಬೇಕು. ಅದರಿಂದ ನಮ್ಮ ಅಂತರಂಗ(ಮನಸ್ಸು) ಹಾಗೂ ಬಹಿರಂಗ(ದೇಹ)ಶುದ್ಧವಾಗುತ್ತದೆ. ಆಗ ದೇವರು ನಮಗೆ ಒಲಿಯುತ್ತಾನೆ. ಭಕ್ತಿ ಭಂಡಾರಿ ಬಸವಣ್ಣನವರು ಈ ವಚನದ ಮೂಲಕ ತಮ್ಮ ಕಾಲದ ಎಲ್ಲರನ್ನು ಶಿವಶರಣರಾಗಿ ಬಾಳುವಂತೆ ಪ್ರೇರೇಪಿಸಿದರು.

ಇತ್ತಿಚಿನ ದಿನಗಳಲ್ಲಿ ದೇಶದ ಸಂಪತ್ತನ್ನು ಕೊಳ್ಳೆ ಹೊಡೆದು ಪರ ರಾಷ್ಟ್ರಗಳಲ್ಲಿ

ಬಚ್ಚಿಟ್ಟಾಗ; ಮರಳು ಮಾಫಿಯಾ, ಖನಿಜ ಮಾಫಿಯ ನೋಡಿದಾಗ, ಹಣಕ್ಕಾಗಿ ಹೆಂಡತಿಯನ್ನೇ ನಾಯಿನರಿಯಂತೆ ಕಚ್ಚಿ ತಿನ್ನುವ ಗಂಡನನ್ನು ಕಂಡಾಗ;ಗಂಡನೇ ಮುಟ್ಟಿದರೆ ಬಲಾತ್ಕಾರವೆಂದು ವಿಚ್ಛೇದನ ಕೇಳುವ ಹೆಂಡತಿ ನೋಡಿದಾಗ; ಗಂಡ-ಹೆಂಡಿರ ಜಗಳ ಬೀದಿ ಪಾಲಾಗಿ ಬೇರೆಯುವರಿಗೆ ಆಹಾರವಾದಾಗ; ಮಕ್ಕಳನ್ನು, ತಂದೆ-ತಾಯಿಗಳನ್ನು ಹಂಚಿಕೆ ಮಾಡಿಕೊಳ್ಳುವುದನ್ನು ಕಂಡಾಗ ಮತ್ತು ಅನಾಥಾಶ್ರಮ, ವೃದ್ಧಾಶ್ರಮಗಳಲ್ಲಿ ಕಂಡಾಗ; ಮಕ್ಕಳು, ಹೆಂಗೆಳೆಯರ ಮೇಲೆ ಗೋಮುಖ ವ್ಯಾಘ್ರಗಳಂತೆ ಅತ್ಯಾಚಾರ, ದೌರ್ಜನ್ಯ ಎಸಗಿದಾಗ; ಬಸವಣ್ಣನವರ ಮೇಲಿನ ವಚನ ಬುದ್ಧಿಗೆ ತಟ್ಟಿದರೆ ಪ್ರತಿಯೊಬ್ಬ ಪ್ರಜೆಯೂ ಸದಾಚಾರಿಯಾಗಿ ಬದುಕಬಹುದು.ಅವರ ಮಾತು ಮಂಥನದಲ್ಲಿ ಮನೆಮಾಡಿದರೆ ಸುಖಿ ಕುಟುಂಬ, ಒಳ್ಳೆಯ ಸಮಾಜ, ಸಶಕ್ತ ದೇಶ ಹುಟ್ಟಬಹುದಲ್ಲವೇ!? ಅವರ ಈ ಮಾತು ಇಂದಿನ ಮತ್ತು ಭವಿಷ್ಯದ ಬೆಳೆವಣಿಗೆಗೆ ಅತ್ಯವಶ್ಯ. ನಾವು ಕಲಿತು ಹಾಗೂ ಮಕ್ಕಳಲ್ಲಿ ಹೃದಯಕ್ಕೆ ತಾಗುವಂತೆ ಕಲಿಸಿಕೊಟ್ಟು ಉಸಿರು ಬಿಡುವವರೆಗೂ ನಮ್ಮೊಂದಿಗಿರಬೇಕಷ್ಟೇ!.

"ಅನುಭವ ಮಂಟಪ" ಮೂಲಕ ಜಗದಗುರು ಬಸವಣ್ಣನವರು ಜಗತ್ತಿಗೆ ಪ್ರಾಯೋಗಿಕವಾಗಿ "ಪಾರ್ಲಿಮೆಂಟ" ವ್ಯವಸ್ಥೆಯನ್ನು ವರದಾನವಾಗಿ ಪರಿಚಯಿಸಿದರು.ಹಾಗೆಯೇ ಅವರು 'ಅನುಭಾವ ಗೋಷ್ಟಿ','ಧರ್ಮ ಗೋಷ್ಟಿ'ದಂತಹ ಸಭೆಗಳನ್ನು ಏರ್ಪಡಿಸಿ"ಅನುಭಾವ ಮಾಡು" ಎಂದರೆ ನಾಲ್ಕಾರು ಜನರು ಸೇರಿ ಚರ್ಚೆ ನಡೆಸುವುದು. ಇವುಗಳ ಮೂಲ ಉದ್ದೇಶ. ಜನರ ಮನದ ಮೈಲಿಗೆ ತೊಳೆಯುವುದು; ದೇವರು, ಧರ್ಮಗಳ ಬಗ್ಗೆ ನಂಬಿಕೆ ಕಡಿಮೆಯಾದರೆ; ಯಾವುದೋ ಧಾರ್ಮಿಕ ವಿಷಯದ ಬಗ್ಗೆ ಸಂದೇಹ ಬಂದರೆ; ತಾನು ಯಾವುದೋ ತಪ್ಪು ಮಾಡಿದ್ದರೆ ಅದನ್ನು ದೃಢಪಡಿಸಿಕೊಳ್ಳಲು ಅಥವಾ ಸರಿಪಡಿಸಿಕೊಳ್ಳಲು ಅಥವಾ ಸ್ಪಷ್ಟಪಡಿಸಿಕೊಳ್ಳಲು ಬಸವಣ್ಣವರು ನಿರ್ಮಿಸಿದ ಒಳ್ಳೆಯ ವೇದಿಕೆಗಳಾಗಿದ್ದವು. ಇದರಿಂದ ಜನರು ಬಡವರಾಗಿದ್ದರೂ ಆತ್ಮವಿಶ್ವಾಸದಿಂದ ಬದುಕುತಿದ್ದರು, ಶ್ರೀಮಂತರು ಮೇಲು-ಕೀಳೆನ್ನದೆ ಅಹಂಭಾವ ತೊರೆದಿದ್ದರು. ಜನ ಪ್ರೀತಿ, ವಾತ್ಸಲ್ಯ, ಕಾಳಜಿಯಿಂದ ಬಾಳ್ವೆ ನಡೆಸುತಿದ್ದರು. ಇಂದು ನಾವು ಧರ್ಮದ ಹೆಸರಿನಲ್ಲಿ ಹಲವಾರು ಉತ್ಸವ, ಹಬ್ಬ, ಮೆರವಣಿಗೆ, ಕೈಗೊಳ್ಳುತ್ತಿದ್ದೆವೆ, ಆದರೆ ಇವೆಲ್ಲಾ ಶುದ್ಧ ಆಡಂಬರದ ಆಚರಣೆಗಳಾಗಿವೆ. ಅಲ್ಲಿ ಶ್ರದ್ಧೆ, ಭಕ್ತಿ, ದೃಢ ನಂಬಿಕೆಗೆ ಜಾಗವಿಲ್ಲದಂತೆ ತೋರಿಕೆಯ ಸಂಗತಿಗಳಾಗಿಬಿಟ್ಟಿವೆ. ಬಸವಣ್ಣನವರ "ಅನುಭವ ಮಂಟಪ" ಉದ್ದೇಶ ಮರುಕಳಸಲಿ ಹಾಗೂ ಮುಂದುವರೆಯಲಿ.

"ಜಂಗಮ ಸೇವೆಯೇ ಸರ್ವ ಶ್ರೇಷ್ಠವಾದುದ್ದು". ನಾನು ಮತ್ತು ಸಮಾಜ ವಿಂಗಡಿಸಿ ನೋಡಿದಾಗ ಸಮಾಜದಲ್ಲಿರುವವರು ನಾವೇ ಅಲ್ಲವೇ, ಮತ್ತಾರು? ಜಂಗಮ ಅಂದರೆ ಸಮಾಜ ಇದು ಮಾರ್ಪಟ್ಟಾಗಿದ್ದು ಹೆಣ್ಣು-ಗಂಡು ಜೀವಗಳ ಗುಂಪಿನಿಂದ. ನಾನು ನನಗಾಗಿ ಕೆಲಸ ಮಾಡುವುದು ನನ್ನ ಸ್ವಾರ್ಥದ ಸಂತೋಷಕ್ಕಾಗಿಯೇ ವಿನಃ ಪರರಿಗಾಗಿ ಮಾಡುವುದಿಲ್ಲ. ಅಂದು ಅನ್ನ ದಾಸೋಹಿ ಬಸವಣ್ಣನವರು ಒಂದು ಲಕ್ಷದ ತೊಂಭತ್ತಾರು ಜನರಿಗೆ ಅನ್ನ ದಾಸೋಹ ಮಾಡುತ್ತಿದ್ದರು ಎಂಬ ಪ್ರತೀತಿ. ಅಲ್ಲದೆ ಅಕ್ಷರ, ಜ್ಞಾನ ದಾಸೋಹ ಮಾಡಿದ್ದಾರೆ.

ಇವತ್ತು ನಾವೆಲ್ಲ ನಮ್ಮ ಕುಟುಂಬಕ್ಕೆ ಸಹಾಯ ಮಾಡುವುದೇ ದೊಡ್ಡ ಹೆಮ್ಮೆಯ ವಿಷಯವಾದಂತಾಗಿದೆ. ಕೇವಲ ಹಣ, ಸಂಪತ್ತು, ಬ್ಯಾಂಕ ಖಾತೆಯಲ್ಲಿ ಹಣ ಉಳಿಯುವಿಕೆ ಕಡೆಗೆ ಗಮ್ಯ. ಸೋಹಂಭಾವವೇ ಜಾಸ್ತಿಯಾಗಿದೆ.ಬಸವಣ್ಣನವರ ಅನುಯಾಯಿಗಳಾಗಿ ಹಲವು ಶರಣರು, ಮಠಾಧೀಶರು, ಸನ್ಯಾಸಿಗಳು "ಅನ್ನ, ಆಶ್ರಯ, ಶಿಕ್ಷಣ" ಕೊಟ್ಟು ಬಡಜನರ ಅಭ್ಯುದಯಕ್ಕೆ ಕಾರಣೀಭೂತರಾಗಿದ್ದರೆ, ಸಂಸಾರದಲ್ಲಿದ್ದುಕೊಂಡು ನಮಗಾದ ಮಟ್ಟಿಗೆ ಬೇರೆಯವರಿಗಾಗಿಯೂ ದುಡಿಯೋಣ. ಅಲ್ಲದೆ ಮುಂದಿನ ಜನಾಂಗವು ಲೋಕದ ಜಂಗಮ, ದಾಸೋಹ, ಪರಹಿತಕ್ಕಾಗಿ ದುಡಿಯುವ ಪದ್ದತಿಗಳನ್ನು ಬೆಳೆಸಿಕೊಳ್ಳುವಂತಾಗಲಿ.

ಕಾಯಕಯೋಗಿ ಬಸವಣ್ಣವರು "ಕಾಯಕವೇ ಕೈಲಾಸ" ಎಂಬುದನ್ನು ಜನಸಮೂಹಕ್ಕೆ ಸಾರಿ ಸಾರಿ ಹೇಳಿದರು. ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಲು, ಜನರನ್ನು ಮತದ ಚೌಕಟ್ಟಿನಿಂದ ಹೊರತರಲು ಬಸವಣ್ಣನವರು ಆಯ್ದುಕೊಂಡ ಕಾಯಕದ ಮಾರ್ಗದಿಂದ ಸಾಧ್ಯವಾಗಿಸಿಕೊಂಡರು.

ಕಾಯಕ ಒಬ್ಬ ವ್ಯಕ್ತಿ ತನ್ನ ಭಕ್ತಿ ಜೀವನದ ಅಂಗವಾಗಿ ಕೈಗೊಳ್ಳುವ ಯಾವುದೇ ವೃತ್ತಿಯನ್ನು ಸೂಚಿಸುತ್ತದೆ. ನಮ್ಮ ಕೆಲಸದಿಂದ ನಾವು ಸುಖ ಪಡೆಯಬೇಕು. ಸದಾ ಪರಿಶ್ರಮ ಜೀವಿಗಳಾಗಿ ದುಡಿಯಬೇಕು. ಆ ಮೂಲಕ ಬದುಕಿನ ಆನಂದ ಕಟ್ಟಿಕೊಳ್ಳಬೇಕೆಂದರು. ಐಶ್ವರ್ಯಕ್ಕೆ ಅತೀ ಬೆಲೆಯಿಲ್ಲದಾಗ ಅವರ ಸಂಗೋಪನೆ ಮತ್ತು ಸಂಚಯನ ಅಮುಖ್ಯವಾಗುತ್ತದೆ. ಎಂದು ತಿಳಿವು ಮಾಡಿಕೊಟ್ಟರು. ಅಂತೆಯೇ ಸತಿಯಾದ ಆಯ್ದಕ್ಕಿ ಲಕ್ಕಮ್ಮ ಪತಿ ಮಾರಯ್ಯ ಅಕ್ಕಿ ಆಯುವ ಕಾಯಕ ಮಾಡುತಿದ್ದ ಒಂದು ದಿನ ಹೆಚ್ಚು ಅಕ್ಕಿ ತಂದಾಗ ಅದನ್ನು ಟೀಕಿಸಿ "ಆಸೆಯೆಂಬುದು ಅರಸಿಂಗಲ್ಲದೆ ಶರಣನಿಗಿಲ್ಲ" ಎಂದು ಬಂದ ಐಶ್ವರ್ಯವನ್ನು ತಿರಸ್ಕರಿಸಿದಳು. ಡಿಜಿಟಲ್ ಯುಗದಲ್ಲಿ ಇರುವ ನಾವು ಒಂದ ಕಡೆ ಸೋಮಾರಿಗಳಾಗಿ ಮಾರ್ಪಾಡುತ್ತಿದ್ದೇವೆ. ಯುವಜನತೆ ಪೋಷಕ ಸಂಪತ್ತಿನ ಹಾಗು ಪರರ ದುಡಿಮೆಯ ಮೇಲೆ ಬದುಕಲು ಇಚ್ಛಿಸುತ್ತಿದೆ. ಇನ್ನೊಂದ ಕಡೆ ಲಂಚ, ಭ್ರಷ್ಟಾಚಾರದ ಮೂಲಕ ಅಗತ್ಯಕ್ಕಿಂತ ಬಹುಪಾಲು ಹಣ ಸಂಗ್ರಹಣೆಯಲ್ಲಿ ತೊಡಗಿ ಮುಂದಿನ ತಲೆಮಾರುಗಳಿಗೆ ಕ್ರೋಡಿಕರಣ. ಇಲ್ಲಿ ಕಾಯಕವನ್ನು ದೈವಿಕ ಭಾವದಿಂದ ನೋಡಲಾಗುತ್ತಿಲ್ಲ. "ಜಪಾನ" ನಂತಹ ಚಿಕ್ಕ ದೇಶ ಯುದ್ದಗಳ ಭೀಕರತೆಗೆ, ಭೂಕಂಪದ ಪ್ರಕೃತಿ ವಿಕೋಪಕ್ಕೆ ಒಳಪಟ್ಟರೂ ಮತ್ತೆ ಪುಟಿದೆದ್ದು ವಿಶ್ವದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ಬಸವಣ್ಣನವರ ನುಡಿಯನ್ನು ಪಾಲಿಸಿ ಭ್ರಷ್ಟಾಚಾರದಂತಹ ಕನಿಷ್ಠ ಲಾಲಸೆಗಳನ್ನು ತೊರೆದು ಜಡತ್ವದಿಂದ ಕ್ರೀಯಾಶೀಲತೆಗೆ ಒಳಪಟ್ಟಿದರೆ ಇಂದು ನಮ್ಮ ದೇಶ ಮುಂಚೂಣಿಯಲ್ಲಿರುತಿತ್ತು. ಇನ್ನು ಕಾಲ ಮಿಂಚಿಲ್ಲ ಕಾಯಕವೇ ಕೈಲಾಸ ಮಂತ್ರದಂತೆ ಜಪಿಸುತ್ತಾ ಶ್ರಮವಹಿಸಿ ದುಡಿದು ದೇಶವನ್ನು ನವನಾಡಾಗಿ ನಿರ್ಮಾಣ ಮಾಡುವುದರಲ್ಲಿ ಉತ್ಸಾಹ ತೋರೋಣ

ವಿಶ್ವ ಸಂಸ್ಥೆಯಲ್ಲಿ ಮಾನವ ಹಕ್ಕುಗಳ ಮಂಡನೆಯಾದಾಗ;
ಅಮೇರಿಕ, ಇಂಗ್ಲೆಂಡ ದೇಶಗಳಲ್ಲಿ ಬಸವಣ್ಣವರ ಪುತ್ಥಳಿ ಸ್ಥಾಪನೆಯಾದಾಗ;

ದೆಹಲಿಯ ಪಾರ್ಲಿಮೆಂಟಲ್ಲಿ ಬಸವಣ್ಣವರ ಪ್ರತಿಮೆ ನೋಡಿದಾಗ,
ಸಮಾನತೆಯ ಹಕ್ಕುಗಳು ಸಂವಿಧಾನಾತ್ಮಕವಾಗಿ ರಚಿಸಿ ಅಸ್ತಿತ್ವಕ್ಕೆ ಬಂದಾಗ;
ಕನ್ನಡ ಸಾಹಿತ್ಯಕ್ಕೆ ವಚನ ಸಾಹಿತ್ಯದ ಕೊಡುಗೆ ನೀಡಿ ಸಮೃದ್ಧಿಗೊಂಡಾಗ;
ಸಾಕ್ಷರತೆ ಆಂದೋಲನ ನಡೆದಾಗ;
ಡಾಂಭಿಕ ಭಕ್ತರ ಕಂಡಾಗ;
ಅಕ್ರಮ ಸಂಪತ್ತು ಲೋಕಾಯುಕ್ತರು ವಶಪಡಿಸಿಕೊಂಡಾಗ ;
ಹಳ್ಳಿ, ಊರಿನ ಗುಡಿಗಳಲ್ಲಿ ವಚನಗಳ ಭಜನೆ ಕೇಳಿಸಿಕೊಂಡಾಗ;

ವಿಶ್ವಗುರು ಬಸವಣ್ಣ, ಭಕ್ತಿಭಂಡಾರಿ ಬಸವಣ್ಣ, ಸಮಾಜಸುಧಾರಕ ಬಸವಣ್ಣ ,ತತ್ವಜ್ಞಾನಿ ಬಸವಣ್ಣ, ಜಗದ ಬೆಳಕು ಬಸವಣ್ಣ ಕ್ರಾಂತಿಕಾರಿ ಬಸವಣ್ಣ, ವಚನ ಪಿತಾಮಹ ಬಸವಣ್ಣ ಸರ್ವಜ್ಞಾನ ಶೀಲ ಬಸವಣ್ಣ, ದಿವ್ಯಗುಣಶೀಲ ಬಸವಣ್ಣ, ನಿರ್ವಾಣಗುಣಶೀಲ ಬಸವಣ್ಣ ಕಾಯಕ ಯೋಗಿ ಬಸವಣ್ಣ ಅನ್ನ ದಾಸೋಹಿ ಬಸವಣ್ಣ ಮತ್ತೆ ಮತ್ತೆ ಕಣ್ಣು ಮುಂದೆ ಬರುತ್ತಾರೆ.

ಆಧುನಿಕ ಕಾಲದಲ್ಲಿ, ಭಾರತೀಯ ಚರಿತ್ರೆಯಲ್ಲಿ ಅಣ್ಣ ಬಸವಣ್ಣನಂತವರು ದೊರುಕುವುದು ಅಸಂಭವ. ಮಧ್ಯ ಕಾಲಿನ ಯುಗಕ್ಕೆ ಸೇರಿದವರಾದರೂ ಆಧುನಿಕವಾಗಿ ಇಂದಿಗೂ ಪ್ರಸ್ತುತವಾಗಿದ್ದಾರೆ.

ಅಲ್ಲಮ ಪ್ರಭುಗಳು ಬಸವಣ್ಣವರನ್ನು "ಯುಗದ ಉತ್ಸಾಹ" ಎಂದ ಮಾತು ಎಷ್ಟು ಸಮಂಜಸವೆನಿಸುವುದು. ಇಂದಿನ ಪ್ರಧಾನ ಮೋದಿಯವರು ಬಸವಣ್ಣವರನ್ನು "JEWEL OF INDIA" ಎಂದು ಕರೆದರು. ಬಸವಣ್ಣವರನ್ನು ಮೆಚ್ಚುವುದು, ವರ್ಣಿಸುವುದು ಸುಲಭ, ಆದರೆ ಅವರ ವಿಚಾರಧಾರೆಗಳು ಅಷ್ಟು ಸುಲಭದಲ್ಲ. ಅವುಗಳನ್ನು ಗಮನಿಸಿ ಅಳವಡಿಸಿ ಕೊಂಡಿದ್ದರೆ ನಮ್ಮ ದೇಶ ಪರರ ಪಾಲಗುತ್ತಿರಲಿಲ್ಲ, ನಾವು ಮತ್ತೊಬ್ಬರ ಗುಲಾಮರಾಗುತ್ತಿರಲಿಲ್ಲ. ದೇಶದ ವಿಜ್ಞಾನಿ, ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂರ ಮಾತಿನಂತೆ

" To be successful in life you just follow one Vachana/ Philosophy of lord Basava you will come out with the flying colors in life. You will meet/complete the object of taking birth on earth."

ಜೀವನದಲ್ಲಿ ಯಶಸ್ವಿಯಾಗಲು ಬಸವಣ್ಣವರ ಒಂದು ವಚನ ಅಥವಾ ತತ್ವ ಪಾಲಿಸಿದರೆ ಸಾಕು. ನೀನು ಬದುಕು ಪೂರ್ತಿ ಸಂತೋಷದಲ್ಲಿ ಹಾರಾಡುತ್ತಿರುತ್ತಿ ಮತ್ತು ನೀನು ಪಡೆದ ಜನ್ಮ ಸಾರ್ಥಕವಾಗಿರುತ್ತದೆ. ಅಂತೆಯೇ ನಾವೆಲ್ಲಾ ನಡೆದು ಬಸವಣ್ಣವರ ಕನಸು "ಸ್ವಾಯ್ಸ್ ಸಮಾಜ ಸಶಕ್ತ ದೇಶ" ನನಸಾಗಿಸೋಣ.

****

ಆತ್ಮನ 84 ಲಕ್ಷ ಜನ್ಮದ ರಹಸ್ಯ.

- ಶ್ರೀಕಾಂತ್.ವೈ.ಬಿ, ಬೆಂಗಳೂರು

ಬದುಕೊಂದು ಸುಂದರವಾದ ಪಯಣ, ಈ ಪಯಣದಲ್ಲಿ ಪಂಚಭೂತಗಳಿಂದ ಸೃಷ್ಟಿಯಾದ ದೇಹವೆಂಬ ವಾಹನಗಳನ್ನ ಹೊತ್ತ ಆತ್ಮಗಳು, ತನ್ನ ನಿಜಸ್ವರೂಪವನ್ನು ಮರೆತು, ಈ ಭವವೆಂಬ ಪಯಣದಲ್ಲಿ 84 ಲಕ್ಷ ಜೀವರಾಶಿಗಳೆಂಬ ಜನನ-ಮರಣಗಳೆಂಬ ನಿಲ್ದಾಣಗಳನ್ನು ದಾಟಿ, ಕೊನೆಗೆ ಮನುಷ್ಯನಾಗಿ ಹುಟ್ಟಿ ಅನೇಕ ವಿಧವಾದ ಸಂಸಾರದ ಪರಿಳಿತಗಳಿಗೆ ಒಳಗಾಗಿ ದಾರಿಗಾಣದೆ ಅಲೆಯುತ್ತವೆ. ಈ ಆತ್ಮಗಳು ಜನನದಿಂದ-ಮರಣ ನಂತರ ಪುನಃ ಮರಣದಿಂದ-ಜನನಕ್ಕೆ ಪಯಣವನ್ನು ಬೆಳೆಸುತ್ತದೆ. ವಾಸ್ತವವಾಗಿ ಈ ಭವಚಕ್ರವನ್ನ ಹಾದು ದೇವನಲ್ಲಿ ಬೆರೆಯುವುದೇ ಆತ್ಮನ ನಿಜವಾದ ಕರ್ತವ್ಯ ಮತ್ತು ಗುರಿಯಾಗಿದೆ. ಇಂತಹ ಶ್ರೇಷ್ಠವಾದ ಜನ್ಮ ಸಿಕ್ಕ ನಂತರ ಅದನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಸದ್ಗುರುವಿನ ಅನುಗ್ರಹವನ್ನು ಹೊಂದಿ, ಪರಮಾತ್ಮನ ನಿಲುವನ್ನು, ತನ್ನ ಅರಿವನ್ನು ಅರ್ಥಾತ್ ಆತ್ಮ ಜ್ಞಾನವನ್ನ ಹೊಂದಿ, ಸಾಧನಾ ಮಾರ್ಗದಿಂದ ನಿಜಮುಕ್ತಿಯನ್ನು ಹೊಂದಬೇಕು. ಆದರೆ ಅಜ್ಞಾನ ಹಾಗೂ ಪಾಪ ಮತ್ತು ಪುಣ್ಯದ ಗಳಿಕೆಯಿಂದೆ ಆತ್ಮಗಳು ಜನನ ಮತ್ತು ಮರಣದ ಈ ಭವಚಕ್ರದ ರಾಟಾಳದಲ್ಲಿಯೇ ಪುನಃ ಪುನಃ ಸಂಚರಿಸುವೆ. ಆತ್ಮವು ಒಟ್ಟು 84 ಲಕ್ಷ ಜನ್ಮಗಳನ್ನು ಹೊಂದುವುದೆಂಬುದು ಶರಣರ ಅಭಿಮತ. ಷಣ್ಮುಖ ಸ್ವಾಮಿಗಳು ಬರೆದಿರುವ ಒಂದು ವಚನವನ್ನು ಇಲ್ಲಿ ಗಮನಿಸೋಣ:

ಅಂಡಜ ಇಪ್ಪತ್ತೊಂದು ಲಕ್ಷ, ಪಿಂಡಜ ಇಪ್ಪತ್ತೊಂದು ಲಕ್ಷ
ಉದ್ಭಿಜ ಇಪ್ಪತ್ತೊಂದು ಲಕ್ಷ, ಜರಾಯುಜ ಇಪ್ಪತ್ತೊಂದು ಲಕ್ಷ
ಇಂತು ಎಂಬತ್ತ ನಾಲ್ಕು ಲಕ್ಷ ಜೀವರಾಶಿಗಳೊಳಗೆ
ಒಂದೊಂದು ಜನ್ಮದೊಳಗೆ ಸಹಸ್ರ ಸಹಸ್ರ ವೇಳೆ ಹುಟ್ಟಿಬಂದ
ಅನೇಕ ದುಃಖವಂತಿರಲಿ......... (ಸ.ವ.ಸಂಪುಟ- ವಚನ ಸಂ.262)

ಇಲ್ಲಿ ಉಕ್ತವಾಗಿರುವ ನಾಲ್ಕು ವರ್ಗದ ಜನ್ಮಗಳು ಅರ್ಥಾತ್ ಅಂಡಜ, ಪಿಂಡಜ, ಉದ್ಭಿಜ ಮತ್ತು ಜರಾಯುಜ ಎಂಬ ಆತ್ಮನ ಜನ್ಮಗಳು ತಲಾ 21 ಲಕ್ಷ ಜನ್ಮಗಳನ್ನು ಸೂಚಿಸುತ್ತದೆ. ಅಂದರೆ 21*4= 84 ಲಕ್ಷ ಜನ್ಮವಾಗುತ್ತದೆ. ಇಲ್ಲಿ ಅಂಡಜ ಜನ್ಮವೆಂದರೆ ಬಾಹ್ಯದಲ್ಲಿ ತತ್ತಿ(ಮೊಟ್ಟೆಗಳ) ಮೂಲಕವಾಗಿ ಉತ್ಪತ್ತಿಯಾಗುವ, ಹಾಗು ಬಾಹ್ಯದಲ್ಲಿ ತತ್ತಿಯಲ್ಲಿಯೇ ಬೆಳವಣಿಗೆಯನ್ನು ಹೊಂದಿ ಬೆಳೆದು, ತತ್ತಿಯನ್ನು ಹೊಡೆದು ಜನ್ಮವನ್ನು ಪಡೆಯುವಂತಹವು ಉದಾ: ಎಲ್ಲಾ ವರ್ಗದ ಪಕ್ಷಿಗಳು, ಸರಿಸೃಪಗಳು ಇತ್ಯಾದಿ. 'ಪಿಂಡಜ' ಎಂದರೆ ಗರ್ಭದಲ್ಲಿಯೇ ಸಂಪೂರ್ಣವಾಗಿ ಬೆಳವಣಿಗೆಯನ್ನು ಹೊಂದಿ, ನಂತರ ಹೊರಮುಖದಲ್ಲಿ ನೇರವಾಗಿ ಶರೀರವನ್ನು ಹೊಂದಿ ಬರುವಂತಹ ಜೀವಿ ವರ್ಗಗಳು ಉದಾ: ಪ್ರಾಣಿಸಂಕುಲಗಳು (ಸಿಂಹ, ಜಿಂಕೆ, ಮನುಷ್ಯ ಮತ್ತು ಇತರೆ). ಇನ್ನು ಉದ್ಭಿಜ ಎಂದರೆ ಬೀಜದ ಮೂಲಕ ಉತ್ಪತ್ತಿಯಾಗುವ ಜಾತಿಯ ಗಿಡಗಳು ಮತ್ತು ಮರಗಳು ಇತ್ಯಾದಿ., 'ಜರಾಯುಜ' ಎಂದರೆ ತನ್ನಷ್ಟಕ್ಕೆ ತಾನೇ ಉತ್ಪತ್ತಿಯಾಗುವ ಜಂತುಗಳು ಅಂದರೆ ಬ್ಯಾಕ್ಟೀರಿಯಗಳು, ವೈರಸ್ ಇತ್ಯಾದಿ. ಈ ರೀತಿಯಾದಂತಹ ಜೀವಜಾತಿಗಳ ಸರಪಳಿಯನ್ನು

ದಾಟಿ ಕೊನೆಗೆ ಆತ್ಮನು ಮಾನವ ಶರೀರವನ್ನು ಧರಿಸುವನು. ಆದ್ದರಿಂದಲೇ ಶರಣರು-ಮಹಾತ್ಮರುಗಳೂ ಮಾನವ ಶರೀರವನ್ನು ಹೊಂದಿದ ಮೇಲೆ ಅವನ್ನು ಸದುಪಯೋಗ ಪಡಿಸಿಕೊಳ್ಳಬೇಕು, ಇಲ್ಲವಾದರೆ ಪುನಃ ಈ ಕೆಳವರ್ಗದ ಜೀವ ಸಂಕುಲದ ಸರಪಳಿಯನ್ನು ಅನುಸರಿಸಿ ಬರಬೇಕಾಗುವುದು ಎಂದು ತಿಳಿಸಿರುವರು. ಇಂತಹ ಜನ್ಮ-ಜನ್ಮಗಳ ವಿವರವನ್ನು ವೈರಾಗ್ಯ ನಿಧಿ ಅಕ್ಕಮಹಾದೇವಿ ತಾಯಿಯು ಈ ರೀತಿಯಲ್ಲಿ ವರ್ಣನೆಯನ್ನು ಮಾಡಿದ್ದಾರೆ:

ಭವದ ಬಟ್ಟೆಯ ದೂರವನೇನ ಹೇಳುವೆನಯ್ಯಾ?
ಎಂಬತ್ತು ನಾಲ್ಕು ಲಕ್ಷ ಊರಲ್ಲಿ ಎಡೆಗೆಯ್ಯಬೇಕು.
ಒಂದೂರಭಾಷೆಯೊಂದೂರಲಿಲ್ಲ.
ಒಂದೂರಲ್ಲಿ ಕೊಂಡಂತಹ ಆಹಾರ ಮತ್ತೊಂದೂರಲಿಲ್ಲ
ಇಂತೀ ಊರ ಹೊಕ್ಕ ತಪ್ಪಿಂಗೆ
ಕಾಯವ ಭೂಮಿಗೆ ಸುಂಕವ ತೆತ್ತು
ಜೀವವನುಳುಹಿಕೊಂಡು ಬರಬೇಕಾಯಿತ್ತು
ಇಂತೀ ಮಹಾಘನದ ಬೆಳಕಿನೊಳಗೆ
ಕಳೆದುಳಿದು ಸುಳಿದಾಡಿ
ನಿಮ್ಮ ಪಾದವ ಕಂಡು ಸುಯಿಧಾನಿಯಾದೆ ಕಾಣಾ ಚೆನ್ನಮಲ್ಲಿಕಾರ್ಜುನಯ್ಯಾ.

ಇದೊಂದು ಮಹತ್ವಪೂರ್ಣವಾದ ವಚನ, ಆತ್ಮನು ಈ ಭವವೆಂಬದೇ ಅರಣ್ಯದಲ್ಲಿ, ಪಂಚಭೂತಗಳಿಂದ ಉತ್ಪತ್ತಿಯಾದ ಮೇಲೆ ವಿವರಿಸಿದ ಅನೇಕ ರೀತಿಯ ಶರೀರಗಳೆಂಬ ಊರಿನೊಳಗೆ ಪ್ರವೇಶಿಸಿ ಒಟ್ಟು 84 ಲಕ್ಷ ಜನ್ಮಗಳನ್ನು ಅನುಸರಿಸಿ ಬರುವನು, ಇಲ್ಲಿ ಆತ್ಮನು ಅನೇಕ ಪ್ರಾಣಿ, ಪಕ್ಷಿಗಳ ಶರೀರವನ್ನು ಕರ್ಮಾನುಸಾರ ಧರಿಸುವುದರಿಂದ, ಒಂದೊಂದು ಪ್ರಾಣಿ ಜನ್ಮಗಳಲ್ಲು ಒಂದೊಂದು ರೀತಿಯ ಭಾಷೆ ಮತ್ತು ಅವುಗಳ ಆಹಾರ ಪದ್ದತಿಯು ಒಂದಕ್ಕಿಂತ ಒಂದು ಸಂಪೂರ್ಣ ವಿಭಿನ್ನವಾಗಿರುತ್ತವೆ. ಆದ್ದರಿಂದ ಅಕ್ಕಮಹಾದೇವಿ ತಾಯಿಯು ಒಂದೂರ ಭಾಷೆ ಮತ್ತೊಂದೂರಲ್ಲಿ ಮತ್ತು ಒಂದೂರ ಆಹಾರ ಮತ್ತೊಂದೂರಲ್ಲಿ ವಿಭಿನ್ನತೆಯನ್ನು ಪಡೆದಿವೆ ಎಂದು ಉಲ್ಲೇಖಿಸಿರುವರು. ಇಂತಹ ಶರೀರವೆಂಬ ಊರನ್ನು ಆತ್ಮನು ಕರ್ಮಾನುಸಾರ ಹೊಕ್ಕಿದ ತಪ್ಪಿಗೆ, ಕೊನೆಗೆ ಕಾಯದ ಕರ್ಮದಿಂದ ಬಳಲಿ, ಕರ್ಮದ ಋಣವನ್ನು ತೀರಿಸುವ ಸಲುವಾಗಿ ಶರೀರವನ್ನು ಪುನಃ ಪುನಃ ವಿಸರ್ಜಿಸ ಬೇಕಾಗುವುದು. ಇದೇ ಇಲ್ಲಿ ಭೂಮಿಗೆ ಸುಂಕವನ್ನು ತೆರುವಿಕೆ ಎಂದಿದ್ದಾರೆ. ಕೊನೆಗೆ ಅರಿವಿನ ಮಾನವ ಜನ್ಮದಲ್ಲಿ ಹುಟ್ಟಿ ಹಿಂದಿನ ಎಲ್ಲಾ ಪಾಪ ಕರ್ಮಗಳ ಋಣವನ್ನು ಅನುಭವಿಸಿ ತೀರಿಸಬೇಕಾಗುವುದು. ಇಂತಹ ಜನ್ಮ-ಜನ್ಮಾಂತರದ ಹುಟ್ಟು-ಸಾವಿನ ಸರಪಳಿಯನ್ನು ಅರಿತು, ಶ್ರೀ ಗುರುವರನ ಪಾದವನ್ನು ಪಡೆದು ನಾನು ನಿಶ್ಚಿಂತನಾದೆನು ಎಂದು ಸಾರಿರುವರು. ಅಂದರೆ ಅರಿವಿನ ಜನ್ಮಕ್ಕೆ ಬಂದು ಶ್ರೀಗುರುವರನ ಪಾದ ಪದ್ಮದ ಸಾನಿಧ್ಯವನ್ನು ಪಡೆದು ಈ ಭವರಾಟಾಳದಿಂದ ಪಾರಾಗುವ ಮಾರ್ಗವನ್ನು ಇಲ್ಲಿ ಅಕ್ಕಮಹಾದೇವಿ ತಾಯಿಯವರು 84 ಲಕ್ಷದ ಜನ್ಮದ ಹಾಗು ಆತ್ಮದ ಪಯಣದ ರಹಸ್ಯವನ್ನು ವಿವರಿಸಿದ್ದಾರೆ.

ಗುರು ಮಾತೆಗೆ ಶರಣು

ಉದಯವಾಯಿತು ನಮ್ಮ ಲಿಂಗಾಯತ ಧರ್ಮವು
ಬಸವಾತ್ಮಜೆಯೇ ಅದು ನಿಮ್ಮಿಂದಲೇ ಸಾಧ್ಯವು
12ನೇ ಶತಮಾನದಲ್ಲಾಗುವ ಈ ಪವಿತ್ರ ಕಾರ್ಯವು
21ನೇ ಶತಮಾನದಲ್ಲಿ ಮಗಳಾಗಿ ನಿಭಾಯಿಸಿದಿರಿ ನೀವು

ಹೆಣ್ಣು ಅಸಾಮಾನ್ಯಳೆಂದು ತೋರಿಸಿದಿರಿ ನೀವು
ನಿಮ್ಮ ನೆರಳಲ್ಲೇ ಕೊನೆವರೆಗೂ ಬೆಳೆಯುವೆವು ನಾವು
ಕರುಣಹೃದಯಿ, ವಾತ್ಸಲ್ಯಧಾರಿಣಿ ಮಹಾತಾಯಿ ನೀವು
ಕೆಚ್ಚೆದೆಯ ಸದ್ವಿನಯದ ಕ್ರಾಂತಿ ಗಂಗೋತ್ರಿ ನಿಮ್ಮ ನಿಲುವು

ಲೌಕಿಕ ಆಸೆ-ಆಕಾಂಕ್ಷೆಗಳ ತೊರೆದು ಈ ಭುವಿಗೆ ಬಂದಿರಿ
ಬಸವ ಧರ್ಮದ ಕೀರ್ತಿಪತಾಕೆ ಜಗದಿ ಹಾರಿಸಿದಿರಿ
ಲಿಂಗಾಯತಕ್ಕೆ ಸ್ವತಂತ್ರ ಮಾಡಲು ಹಗಲಿರುಳು ಶ್ರಮಿಸುತ್ತಿರುವಿರಿ
ನಮಗೆ ನೀವೇ ಸರಿಸಾಟಿ ಮತ್ತಾರೂ ಇಲ್ಲಾರಿ

ನೀವಿಲ್ಲದ ಈ ಧರ್ಮವು ಏನ ಹೇಳಲಿ ಬರಿದೇ ಶೂನ್ಯ
ಶರಣರಿಗೆ ನೀವು ತೋರಿದ ಮಾತೃಪ್ರೇಮ ಅನನ್ಯ
ನಿಮ್ಮೆಲ್ಲಾ ಹೋರಾಟಗಳಿಗೆ ಅನುದಿನ ಸಿಗಲಿ ಮಾನ್ಯ
ನಿಮ್ಮ ಗುರುವಾಗಿ ಪಡೆದ ಬಸವಸುತೆ ರಾಜೇಶ್ವರಿ ಧನ್ಯ.

–ಬಸವರಾಜೇಶ್ವರಿ ಸೀತಾ
ಪುಣೆ, ಮಹಾರಾಷ್ಟ್ರ

ಅಕ್ಕನ ಅಮರವಾಣಿ

ಆವಾಗಳೂ ಎನ್ನ ಮನ ಉದರಕ್ಕೆ ಹರಿವುದು.
ಕಾಣಲಾರೆನಯ್ಯಾ ನಿಮ್ಮುವ ಭೇದಿಸಲರಿಯೆ.
ಮಾಯದ ಸಂಸಾರದಲ್ಲಿ ಸಿಲುಕಿದೆನು.
ಎನ್ನ ದೇವ ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ,
ನಿಮ್ಮ ಹೊದ್ದುವಂತೆ ಮಾಡಾ, ನಿಮ್ಮ ಧರ್ಮ.

ಯಾವಾಗಲೂ ಮನಸ್ಸು ಹೊಟ್ಟೆಯ ಬಗ್ಗೆಯೇ ಚಿಂತಿಸುವುದು. ಈ ತುತ್ತಿನ ಚೀಲ ತುಂಬುವುದೇ ಇಲ್ಲ. ಬೆಳಿಗ್ಗೆ ಉಪಾಹಾರ, ಮಧ್ಯಾಹ್ನ ಊಟ, ರಾತ್ರಿಯ ಊಟ ಹೀಗೆ ಹೊಟ್ಟೆಯ ಬೇಡಿಕೆ ನಿರಂತರ. ಹೀಗಾಗಿ ದೇವಾ, ಈ ಮನಸ್ಸು ಉದರದ ಕಡೆಗೆ ಕೊಡುವಷ್ಟು ಗಮನವನ್ನು ನಿಮ್ಮ ಕಡೆಗೆ ಕೊಡುವುದಿಲ್ಲ. ಹಸಿವೆ ಎಂಬ ಮಾಯದ ಜಂಜಾಟದಲ್ಲಿ ಸಿಲುಕಿದೆನು. ದೇವಾ, ನಿಮ್ಮನ್ನು ಹೊದ್ದುವಂತೆ ಮಾಡಾ ನಿಮ್ಮ ಧರ್ಮ." ಎಂದು ಅಕ್ಕನವರು ದೇವನಲ್ಲಿ ಬೇಡಿಕೊಳ್ಳುತ್ತಾರೆ.

ಇಳಕಲ್ ಮಠದಲ್ಲಿ









Septmber Sanchike Published on 01-09-2017
Name of the Printer - Sumuka Printers, Bengalure-560010
Registered with Registrar of News Papers in India, New Delhi No.19988/70
Postal Registration (SSP os BG-West Dn)No.KA/BGW-50/wpp-17/2015-17,
Licenced to Post the Printed Magazine without Prepayment (WPP-17).
Posted at Bengalure PSO, Mysuru Road, (Bg-560026) on 3rd, 10th,
20th of every month, Pages 32+4